# ಬೋಧಕರ ವಿವರ


೧. ಪೂರ್ಣ ಹೆಸರು : ಡಾ. ಶಿವಾನಂದ ಎಸ್. ವಿರಕ್ತಮಠ

೨. ಜನ್ಮ ದಿನಾಂಕ : ೦೧-೦೬-೧೯೬೫

೩. ವಿದ್ಯಾರ್ಹತೆ : ಎಂ ಎ, ಎಂ ಫಿಲ್, ಪಿಎಚ್.ಡಿ, ಎನ್ ಇ ಟಿ

೪. ವಿಳಾಸ : ಸಹ ಪ್ರಾಧ್ಯಾಪಕ, ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩೨೭೬

೫. ಸ್ಥಿರ ದೂರವಾಣಿ ಸಂಖ್ಯೆ : ೦೮೩೯೪-೨೪೧೩೩೭

೬. ಮೊಬೈಲ್ ಸಂಖ್ಯೆ : ೯೪೮೦೧ ೫೨೪೯೦

೭. ಫ್ಯಾಕ್ಸ್ ಸಂಖ್ಯೆ : ೦೮೩೯೪-೨೪೧೩೩೪

೮. ಇ-ಮೇಲ್ ವಿಳಾಸ : **s.viraktamath 1965 @ g mail. com**


೯. ಕಾರ್ಯನಿರ್ವಹಿಸುತ್ತಿರುವ ವಿಭಾಗ : ಮಹಿಳಾ ಅಧ್ಯಯನ ವಿಭಾಗ

೧೦. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ : ಸಹ ಪ್ರಾಧ್ಯಾಪಕ

೧೧. ವಿಷಯ ತಜ್ಞತೆ :
೧. ಮಹಿಳಾ ಅಧ್ಯಯನ
೨. ಸಾಹಿತ್ಯ ಅಧ್ಯಯನ
೩. ಕನ್ನಡ ಭಾಷಾಧ್ಯಯನ
೪. ಜಾನಪದ ಅಧ್ಯಯನ
೫. ಹಸ್ತಪ್ರತಿ ಶಾಸ್ತ್ರ ಮತ್ತು ಗ್ರಂಥ ಸಂಪಾದನೆ
೬. ಕಾವ್ಯ ಮೀಮಾಂಸೆ ಮತ್ತು ಛಂದಸ್ಸು

೧೨. ಅಧ್ಯಯನ ನಡೆಸುತ್ತಿರುವ ಆಸಕ್ತಿಯ ಕ್ಷೇತ್ರಗಳು :
೧. ಮಹಿಳಾ ಅಧ್ಯಯನ ಮತ್ತು ಇತರ ಜ್ಞಾನಶಿಸ್ತುಗಳು
೨. ಮಹಿಳೆ ಮತ್ತು ಧರ್ಮ
೩. ಸಾಹಿತ್ಯ ಮತ್ತು ಭಾಷಾಭಿವ್ಯಕ್ತಿಯಲ್ಲಿ ಮಹಿಳೆ
೪. ಮಹಿಳೆ ಮತ್ತು ದೇಸಿ ವೈದ್ಯ
೫. ಕರ್ನಾಟಕದ ಅನುಭಾವಿ ಪರಂಪರೆ
೬. ಮಹಿಳೆ ಮತ್ತು ಸಂವಹನ ಮಾಧ್ಯಮಗಳು

೧೩. ಯೋಜನೆಗಳ ವಿವರ :

೧೩.೧. ಪೂರ್ಣಗೊಳಿಸಿದ ಸಾಂಸ್ಥಿಕ ಯೋಜನೆಗಳು :

೧. ಸಂಶೋಧನ ಕರ್ನಾಟಕ ೧೯೯೨-೯೩ ಪೂರ್ಣ

ಕರ್ನಾಟಕದ ವಿಷಯಗಳನ್ನು ಕುರಿತಂತೆ ವಿವಿಧ ವಿಶ್ವವಿದ್ಯಾಲಯಗಳಲ್ಲಿ ನಡೆದ ಪಿಎಚ್ ಡಿ ಮಹಾಪ್ರಬಂಧಗಳ ಪರಿಚಯಾತ್ಮಕ ಕೃತಿಯಾಗಿ ಈ ಸಂಪುಟವನ್ನು ರೂಪಿಸಲಾಗಿದ್ದು, ನಾನು ಕರ್ನಾಟಕ ವಿಶ್ವವಿದ್ಯಾಲಯದ ಮಾಹಿತಿಯನ್ನು ಸಂಗ್ರಹಿಸಿ ಒದಗಿಸಿದೆ. ಭಾಷಿಕ, ಸಾಹಿತ್ಯಿಕ, ಜಾನಪದ, ಮಾನವಿಕ ಹಾಗೂ ವೈಜ್ಞಾನಿಕ ವಿಷಯಗಳ ಅಧ್ಯಯನಗಳ ಸಮಗ್ರ ಮಾಹಿತಿಯನ್ನು ಕ್ರೋಢೀಕರಿಸುವುದು ಇದರ ಆಶಯವಾಗಿದೆ. ಇದನ್ನು ಇತ್ತೀಚೆಗೆ ಸಮಗ್ರವಾಗಿ ಕನ್ನಡ ವಿವಿ ಗ್ರಂಥಾಲಯವು ರೂಪಿಸಿ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಬಿಡುಗಡೆ ಮಾಡಿದೆ.

೨. ಪಿಯುಸಿ, ವಿಜ್ಞಾನ ಪಠ್ಯಪುಸ್ತಕಗಳು ೧೯೯೫-೯೬ ಪೂರ್ಣ

ಪಿಯುಸಿ ಪಠ್ಯಕ್ರಮದ ಅನುಸಾರ ಕನ್ನಡದಲ್ಲಿ ವಿಜ್ಞಾನ ಪಠ್ಯಪುಸ್ತಕಗಳನ್ನು ಸಿದ್ಧಪಡಿಸುವ ಯೋಜನೆಯನ್ನು ಸಂಕಲನ ವಿಭಾಗವು ಕೈಗೆತ್ತಿಕೊಂಡು ನಿರ್ವಹಿಸಿತು. ಕನ್ನಡದಲ್ಲಿ ವಿಜ್ಞಾನ ವಿಷಯಗಳನ್ನು ಒದಗಿಸುವುದು ಇದರ ಹಿಂದಿನ ಆಶಯವಾಗಿದೆ. ಪಿಯುಸಿ ಎರಡೂ ವರ್ಷಗಳ ನಾಲ್ಕು ವಿಷಯಗಳಾದ ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಮತ್ತು ಗಣಿತ ವಿಷಯಗಳ ಪಠ್ಯ ಪುಸ್ತಕಗಳಾಗಿ ಇವುಗಳನ್ನು ಸಿದ್ಧಪಡಿಸಿ ವಿವಿಯಿಂದ ಪ್ರಕಟಿಸಲಾಯಿತು. ಈ ಯೋಜನೆಯ ಮುಖ್ಯಸ್ಥರ ಜೊತೆ ಸೇರಿಕೊಂಡು ಕರಡು ಪರಿಶೀಲನೆ ಹಾಗೂ ಸಂಕಲಗಳ ಕೆಲಸವನ್ನು ನಿರ್ವಹಿಸಲಾಯಿತು. ವಿಜ್ಞಾನ ವಿಷಯಗಳನ್ನು ಕನ್ನಡದಲ್ಲಿ ಅರ್ಥೈಸಿಕೊಳ್ಳಲು ಈ ಪಠ್ಯಪುಸ್ತಕಗಳು ನೆರವಾಗುತ್ತವೆ.

೩. ಜೀವಜಗತ್ತು ವಿಶ್ವಕೋಶ ೧೯೯೬-೯೮ ಪೂರ್ಣ

ಕನ್ನಡ ವಿಶ್ವವಿದ್ಯಾಲಯವು ವಿಷಯ ವಿಶ್ವಕೋಶಗಳ ಯೋಜನೆಯನ್ನು ಕೈಗೆತ್ತಿಕೊಂಡು ನಿರ್ವಹಿಸಲು ಮುಂದಾದಾಗ ನಮಗೆ ವಹಿಸಿಕೊಡಲಾದ ಯೋಜನೆಯಾಗಿ ಜೀವಜಗತ್ತು ವಿಷಯ ವಿಶ್ವಕೋಶವನ್ನು ರೂಪಿಸಲಾಯಿತು. ಈ ವಿಶ್ವಕೋಶವು ಜೀವ ವಿಜ್ಞಾನ ವಿಷಯಕ್ಕೆ ಸಂಬಂಧಪಟ್ಟಿದ್ದು, ಇದು ಕರ್ನಾಟಕದಾದ್ಯಂತ ಸಂಶೋಧನೆ ಮಾಡಿರುವ ಜೀವ ವಿಜ್ಞಾನ ವಿದ್ವಾಂಸರು ಸಿದ್ದಪಡಿಸಿ ಕಳಿಸಿದ ಲೇಖನಗಳನ್ನು ಒಳಗೊಂಡ

PDF created with pdfFactory trial version www.pdffactory.com

ಸಂಪುಟವಾಗಿದೆ. ಮೂವರು ವಿಷಯ ತಜ್ಞರು ಇದನ್ನು ಪರಿಷ್ಕರಿಸಿ ಕೊಟ್ಟಿದ್ದಾರೆ. ಪ್ರಧಾನ ಸಂಪಾದಕರು, ಸಂಪಾದಕರು, ಸಹಸಂಪಾದಕರು ಹಾಗೂ ವಿಷಯ ತಜ್ಞರು ಎಂಬ ಸಂಪಾದಕ ಮಂಡಳಿಯಲ್ಲಿ ನಾನು ಸಹ ಸಂಪಾದಕನಾಗಿ ಕರಡು ಪರಿಶೀಲನೆ ಕಾರ್ಯವನ್ನು ನಿರ್ವಹಿಸಿದ್ದೇನೆ. ಈ ಕೃತಿಯನ್ನು ಕನ್ನಡ ವಿಶ್ವವಿದ್ಯಾಲಯವು ಪ್ರಕಟಿಸಿದ್ದು, ಜೀವವಿಜ್ಞಾನ ವಿಷಯವನ್ನು ಕನ್ನಡದಲ್ಲಿ ಓದುವವರಿಗೆ ಇದು ಅಮೂಲ್ಯ ಆಕರಗ್ರಂಥವಾಗಿದೆ.

೪. ಕರ್ನಾಟಕ ಕನ್ನಡಿ ೧೯೯೮-೯೯ ಪೂರ್ಣ

ಕರ್ನಾಟಕದ ಚರಿತ್ರೆ, ಪ್ರಾಗೈತಿಹಾಸಿಕ ನೆಲೆಗಳು ಹಾಗೂ ಇಲ್ಲಿನ ಜನಸಮುದಾಯಗಳ ಸಂಸ್ಕೃತಿ ಹಾಗು ಸಾಹಿತ್ಯ ಕಲೆಗಳ ಒಂದು ಸ್ಥೂಲ ನೋಟವನ್ನು ಕಟ್ಟಿಕೊಡುವ ಉದ್ದೇಶದಿಂದ ಕರ್ನಾಟಕದ ಪರಿಚಯ ಪುಸ್ತಿಕೆಯಾಗಿ ಕರ್ನಾಟಕದ ಕನ್ನಡಿ ಕೃತಿಯನ್ನು ರೂಪಿಸಲಾಗಿದೆ. ಇತರ ಲೇಖಕರೊಡನೆ ಸೇರಿಕೊಂಡು ಈ ಕರ್ನಾಟಕ ಕನ್ನಡಿಯನ್ನು ಸಿದ್ಧಪಡಿಸಿದೆ. ವಿಶ್ವವಿದ್ಯಾಲಯವು ಇದನ್ನು ಪ್ರಕಟಿಸಿದೆ.

೫. ಕನ್ನಡ ಅಧ್ಯಯನ ಪತ್ರಿಕೆ (ತ್ರೈಮಾಸಿಕ) ೧೯೯೯-೨೦೦೩ ಪೂರ್ಣ

(ಸಹಾಯಕ ಸಂಪಾದಕ)ಪ್ರತಿ ೩ ತಿಂಗಳಿಗೊಂದರಂತೆ ಒಟ್ಟು ೧೪ ಬಿಡಿ ಸಂಚಿಕೆಗಳು

ಕನ್ನಡ ಅಧ್ಯಯನ ಪತ್ರಿಕೆಯನ್ನು ಮೂರು ತಿಂಗಳಿಗೊಂದು ಸಂಪುಟದಂತೆ ವಿಶ್ವವಿದ್ಯಾಲಯದಿಂದ ಪ್ರಕಟಿಸಲಾಗಿದೆ. ಕರ್ನಾಟಕದಲ್ಲಿ ನಡೆಯುತ್ತಿರುವ ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ಸಮಾಜಗಳ ಕುರಿತ ಸಂಶೋಧನ ಲೇಖನಗಳನ್ನು ಪ್ರಕಟಿಸುವ ಅಧ್ಯಯನ ಪತ್ರಕೆಯಾಗಿದೆ. ಪ್ರತಿ ಸಂಪುಟವು ಅನೇಕ ವಿದ್ವಾಂಸರ ಲೇಖನಗಳು, ಸಂವಾದ, ಸಂದರ್ಶನ ಹೀಗೆ ವೈವಿಧ್ಮಯವಾಗಿ ರೂಪಿಸಲಾಗಿದ್ದು, ವಾರ್ಷಿಕ ಚಂದಾದಾರರಿಗೆ ಇವುಗಳನ್ನು ಕಳಿಸಲಾಗಿದೆ. ಇದು ವಿಶ್ವವಿದ್ಯಾಲಯದ ಮಹತ್ವದ ಅಕೆಡೆಮಿಕ ಪತ್ರಿಕೆಯಾಗಿ ಈಗಲೂ ಪ್ರಕಟವಗುತ್ತಿದೆ. ನಾನು ಹದಿನಾಲ್ಕು ಸಂಪುಟಗಳಿಗೆ ಸಹಾಯಕ ಸಂಪಾದಕನಾಗಿ ಕಾರ್ಯ ನಿರ್ವಹಿಸಿದ್ದೇನೆ.

೬. ಕನ್ನಡ ಸಾಹಿತ್ಯ ಮತ್ತು ಇತರ ಜ್ಞಾನಶಿಸ್ತುಗಳು ೨೦೦೨-೦೩ ಪೂರ್ಣ

ಕನ್ನಡ ಸಾಹಿತ್ಯವನ್ನು ಇತರ ಜ್ಞಾನ ಶಿಸ್ತುಗಳ ಸಂಬಂಧದಿಂದ ಅಧ್ಯಯನ ಮಾಡುವ ಸಾಧ್ಯತೆಯನ್ನು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಆರಂಭದಿಂದಲೂ ಗಮನಿಸಿಕೊಂಡು ಬರಲಾಗಿದೆ. ಸಾಹಿತ್ಯ ಎನ್ನುವ ಜ್ಞಾನಶಾಖೆಯು ಆಂತರಿಕವಾಗಿ ಬೇರೆ ಬೇರೆ ಜ್ಞಾನಶಿಸ್ತುಗಳೊದಿಗೆ ನಿಕಟವಾದ ಅಂತರ್ ಸಂಬಂಧವನ್ನು ಹೊಂದಿರುತ್ತದೆ. ಈ ಸಂಬಂಧದ ಸ್ವರೂಪವನ್ನು ಗ್ರಹಿಸುವ ಚಿಂತಕರ ಲೇಖನಗಳನ್ನು ಸಂಗ್ರಹಿಸಿ, ಅವುಗಳ ತುಲನಾತ್ಮಕ ಅಧ್ಯಯನದ ಎಳೆಗಳಿಂದ ಸಾಹಿತ್ಯ ಅಧ್ಯಯನದ ಸಾಧ್ಯತೆಯನ್ನು ವಿಸ್ತರಿಸುವುದು ಈ ಸಂಪುಟದ ಆಶಯವಾಗಿದೆ. ಸಾಹಿತ್ಯ ಮತು ತತ್ವಶಾಸ್ತ್ರ, ಸಾಹಿತ್ಯ ಮತ್ತು ಮನಶಾಸ್ತ್ರ, ಸಾಹಿತ್ಯ ಮತ್ತು ಸಮಾಜಶಾಸ್ತ್ರ, ಸಾಹಿತ್ಯ ಮತ್ತು ಪುರಾಣ, ಸಾಹಿತ್ಯ ಮತ್ತು ಚರಿತ್ರೆ, ಸಾಹಿತ್ಯ ಮತ್ತು ವಿಜ್ಞಾನ, ಸಾಹಿತ್ಯ ಮತ್ತು ಕಲೆ ಹೀಗೆ ವಿಭಿನ್ನ ಜ್ಞಾನಶಿಸ್ತುಗಳ ಸಂಬಂಧವನ್ನು ಸಾಹಿತ್ಯ ಅಧ್ಯಯನದ ವಿಸ್ತರಣೆಯಾಗಿ ನೋಡುವ ಬಗೆಯನ್ನು ಇಲ್ಲಿ ಮಾಡಲಾಗಿದೆ.

೭. ಶತಮಾನದ ಚಿಂತನೆ : ಮಹಿಳೆ ೨೦೦೩-೦೪ ಪೂರ್ಣ

ಕನ್ನಡ ಸಾಹಿತ್ಯ ಮತು ಸಾಂಸ್ಕೃತಿಕ ಅಧ್ಯಯನ ವಲಯಗಳಲ್ಲಿ ಮಹಿಳಾ ಚಿಂತನೆ ಎಂಬುದು ಒಂದು ಕೇಂದ್ರ ನೆಲೆಗೆ ಬಂದಿರುವುದು ಎಪ್ಪತ್ತರದಶಕದಿಂದೀಚೆಗೆ ಎಂದು ಹೇಳಬಹುದು. ಅದರೂ ಸಂಸ್ಕೃತಿ ಚಿಂತಕರು ಮಹಿಳಾ ಪ್ರಶ್ನೆಯನ್ನು ಲಕ್ಷ್ಯವಾಗಿರಿಸಿಕೊಂಡು ನಡೆಸಿದ ಚಿಂತನೆಗಳೆಲ್ಲವನ್ನು ಒಟ್ಟಿಗೆ ಇಟ್ಟು ಅವುಗಳ ಚಾರಿತ್ರಿಕ ಸಂಬಂಧ ಹಾಗೂ ಬೆಳವಣಿಗೆಯನ್ನು ಗುರುತಿಸುವುದು ಈ ಸಂಪುಟದಲ್ಲಿ ಮಾಡಲಾಗಿದೆ. ಇಪ್ಪತ್ತನೆಯ ಶತಮಾನದ ಮುಖ್ಯ ಚಿಂತಕರ ಲೇಖನಗಳನ್ನು ಆಯ್ಕೆಮಾಡಿ ಈ ಸಂಪುಟವನ್ನು ರೂಪಿಸಲಾಗಿದೆ. ಈ ಆಯ್ದ ಲೇಖನಗಳ ಹಿಂದಿರುವ ಮಹಿಳಾ ಚಿಂತನೆಯನ್ನು ಕ್ರೋಢೀಕರಿಸಿ ವಿಶ್ಲೇಷಿಸುವುದು ಈ ಸಂಪುಟದ ಚೌಕಟ್ಟಾಗಿದೆ.

೮. ಹೆಣ್ಣು ಮತ್ತು ಭಾಷೆ ೨೦೦೬-೦೭ ಪೂರ್ಣ

ಕನ್ನಡ ವಿವಿಯ ಯುಜಿಸಿ ಮಹಿಳಾ ಅಧ್ಯಯನ ಕೇಂದ್ರವು ಸಿಐಐಎಲ್ ಮೈಸೂರು ಸಂಸ್ಥೆಯ ಸಹಯೋಗದಲ್ಲಿ ನಡೆಸಿದ ವಿಚಾರ ಸಂಕಿರಣದ ಪರಿಷ್ಕೃತ ರೂಪವಾಗಿ ಈ ಕೃತಿಯನ್ನು ಪ್ರಕಟಿಸಲಾಗಿದೆ. ಮಹಿಳಾ ಅಧ್ಯಯನ ಕ್ಷೇತ್ರವು ವಿವಿಧ ಜ್ಞಾನ ಶಿಸ್ತುಗಳ ಸಂಬಂಧವನ್ನು ಹೊಂದಿರುವುದರಿಂದ ಪ್ರಸ್ತುತ ಕೃತಿಯಲ್ಲಿ ಮಹಿಳೆಯನ್ನು ಕುರಿತಂತೆ ಸ್ತ್ರೀವಾದಿ ಭಾಷಾ ಚಿಂತನೆಯು ಯಾವ ಸ್ವರೂಪದಲ್ಲಿದೆ ಎಂಬುದನ್ನು ಶೋಧಿಸುವುದಾಗಿದೆ. ಕೆ ವಿ ನಾರಾಯಣ, ಎಚ್ ಎಸ್ ರಾಘವೇಂದ್ರರಾವ್, ಲಿಂಗದೇವರು ಹಳೆಮನೆ, ಪಾಂಡುರಂಗಬಾಬು, ಪಿ ಮಹಾದೇವಯ್ಯ, ಅಶೋಕಕುಮಾರ ರಂಜೇರೆ, ಸಾಂಬಮೂರ್ತಿ, ಮಮತಾ ಜಿ ಸಾಗರ್, ಶಿವಾನಂದ ವಿರಕ್ತಮಠ ಮೊದಲಾದ ವಿದ್ವಾಂಸರ ಲೇಖನಗಳನ್ನು ಇಲ್ಲಿ ಸಂಪಾದಿಸಿಕೊಡಲಾಗಿದೆ. ಇತರ ಸಂಪಾದಕ ಸದಸ್ಯರೊಂದಿಗೆ ಸೇರಿ ಈ ಕೃತಿಯನ್ನು ಪ್ರಕಟಿಸಲಾಗಿದೆ.

೯. ಮಹಿಳಾ ಆರ್ಥಿಕತೆ ೨೦೦೬-೦೭ ಪೂರ್ಣ

PDF created with pdfFactory trial version www.pdffactory.com

ಕನ್ನಡ ವಿವಿಯ ಯುಜಿಸಿ ಮಹಿಳಾ ಅಧ್ಯಯನ ಕೇಂದ್ರವು ಎಂ ಎ ಮಹಿಳಾ ಅಧ್ಯಯನ ತರಗತಿಗಳಿಗಾಗಿ ನಡೆಸಿದ ವಿಶೇಷ ಉಪನ್ಯಾಸಗಳನ್ನು ಪರಿಷ್ಕರಿಸಿ ಈ ಕೃತಿಯನ್ನು ಪ್ರಕಟಿಸಲಾಗಿದೆ. ಮಹಿಳಾ ಅಧ್ಯಯನ ಕ್ಷೇತ್ರವು ವಿವಿಧ ಜ್ಞಾನ ಶಿಸ್ತುಗಳ ಸಂಬಂಧವನ್ನು ಹೊಂದಿರುವುದರಿಂದ ಪ್ರಸ್ತುತ ಕೃತಿಯಲ್ಲಿ ಮಹಿಳೆಯನ್ನು ಕುರಿತಂತೆ ಅರ್ಥಶಾಸ್ತ್ರ ಮತ್ತು ಅಭಿವೃದ್ಧಿ ಚಿಂತನೆಯ ವಲಯವನ್ನು ಪರಿಚಯಿಸುವುದಾಗಿದೆ. ವಿಶೇಷ ಉಪನ್ಯಾಸಕರಾಗಿ ಆಗಮಿಸಿದ ವಿದ್ವಾಂಸರ ಲೇಖನಗಳನ್ನು ಇಲ್ಲಿ ಸಂಪಾದಿಸಿಕೊಡಲಾಗಿದೆ. ಇತರ ಸಂಪಾದಕ ಸದಸ್ಯರೊಂದಿಗೆ ಸೇರಿ ಈ ಕೃತಿಯನ್ನು ಪ್ರಕಟಿಸಲಾಗಿದೆ.

೧೦. ಮಹಿಳೆ: ದುಡಿಮೆ ಮತ್ತು ಬಿಡುವು ೨೦೦೬–೦೭ ಪೂರ್ಣ

ಮಹಿಳಾ ಅಧ್ಯಯನ ವಿಭಾಗವು ನಡೆಸಿದ ವಿಚಾರ ಸಂಕಿರಣದ ಲೇಖನಗಳನ್ನು ಪರಿಷ್ಕರಿಸಿ ಈ ಕೃತಿಯನ್ನು ಪ್ರಕಟಿಸಲಾಗಿದೆ. ಮಹಿಳಾ ಅಧ್ಯಯನ ಕ್ಷೇತ್ರವು ವಿವಿಧ ಜ್ಞಾನ ಶಿಸ್ತುಗಳ ಸಂಬಂಧವನ್ನು ಹೊಂದಿರುವುದರಿಂದ ಪ್ರಸ್ತುತ ಕೃತಿಯಲ್ಲಿ ಮಹಿಳೆಯನ್ನು ಕುರಿತಂತೆ ಸಾಂಪ್ರದಾಯಿಕ ಅರ್ಥಶಾಸ್ತ್ರಕ್ಕಿಂತ ಭಿನ್ನವಾದ ರೀತಿಯಲ್ಲಿ ಮಹಿಳಾ ದುಡಿಮೆ ಮತ್ತು ಬಿಡುವು ಪರಿಕಲ್ಪನೆಗಳನ್ನು ಸ್ತ್ರೀವಾದಿ ಚಿಂತನೆಯ ದೃಷ್ಟಿಕೋನದಿಂದ ವಿಶ್ಲೇಷಿಸಲಾಗಿದೆ. ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ವಿದ್ವಾಂಸರ ಲೇಖನಗಳನ್ನು ಇಲ್ಲಿ ಸಂಪಾದಿಸಿಕೊಡಲಾಗಿದೆ. ಇತರ ಸಂಪಾದಕ ಸದಸ್ಯರೊಂದಿಗೆ ಸೇರಿ ಈ ಕೃತಿಯನ್ನು ಪ್ರಕಟಿಸಲಾಗಿದೆ.

೧೧. ಹೆಜ್ಜೆ ಗುರುತು ಪತ್ರಿಕೆ ೨೦೦೫–೦೯ ಪೂರ್ಣ

(ಸಲಹಾ ಸಂಪಾದಕ/ ಸಂಪಾದಕ, ಯುಜಿಸಿ ಮಹಿಳಾ ಅಧ್ಯಯನ ಕೇಂದ್ರದ ತ್ರೈಮಾಸಿಕ ಪತ್ರಿಕೆ)

ಕನ್ನಡ ವಿಶ್ವವಿದ್ಯಾಲಯದ ಯುಜಿಸಿ ಮಹಿಳಾ ಅಧ್ಯಯನ ಕೇಂದ್ರವು ಪ್ರಕಟಿಸುತ್ತಿರುವ ಕೇಂದ್ರದ ಪರಿಚಯ ಪತ್ರಿಕೆ ಇದಾಗಿದೆ. ಮಹಿಳಾ ಅಧ್ಯಯನ ಕೇಂದ್ರವು ನಡೆಸುತ್ತಿರುವ ಕಾರ್ಯಕ್ರಮಗಳ ಪರಿಚಯ ಮತ್ತು ಈ ಕುರಿತಂತೆ ನಾಡಿನಾದ್ಯಂತ ನಡೆಯುತ್ತಿರುವ ಚಟುವಟಿಕೆಗಳ ಮಾಹಿತಿ ಹಾಗೂ ಮಹಿಳಾ ಅಧ್ಯಯನಕ್ಕೆ ಸಂಬಂಧಿಸಿದಂತೆ ನಡೆಯುವ ವಿದ್ಯಮಾನಗಳನ್ನು ಸಂಕ್ಷಿಪ್ತವಾಗಿ ವಿಮರ್ಶಿಸಿ ಇಲ್ಲಿ ಒದಗಿಸಲಾಗುತ್ತದೆ. ಈ ಚೌಕಟ್ಟಿನಲ್ಲಿ ಅನೇಕ ಸಂಚಿಕೆಗಳನ್ನು ಕೇಂದ್ರಿದಂದ ಪ್ರಕಟಿಸಲಾಗಿದ್ದು, ನಾನು ಸಂಪಾದಕನಾಗಿ ಹಾಗೂ ಸಲಹಾ ಸಂಪಾದಕನಾಗಿ ಕಾರ್ಯ್ ನಿರ್ವಹಣೆ ಮಾಡಿದ್ದೇನೆ.

೧೩.೨. ಪೂರ್ಣಗೊಳಿಸಿದ ವೈಯಕ್ತಿಕ ಯೋಜನೆಗಳು :

೧. ರಾಚಪ್ಪಯ್ಯನ ಕೃತಿಗಳು ೧೯೯೮–೯೯ ಪೂರ್ಣ

ಕೊಡೇಕಲ್ಲ ಕಾಲಜ್ಞಾನ ಪರಂಪರೆಯ ಬಸವಣ್ಣನವರ ಹಿರಿಯ ಮಗನಾದ ರಾಚಪ್ಪಯ್ಯ ಮೈಸೂರು ಪ್ರದೇಶದ ಜನಪದ ಮಹಾಕಾವ್ಯದಲ್ಲಿ ಒಬ್ಬ ನಾಯಕನಾಗಿ ಪ್ರಖ್ಯಾತನಾಗಿದ್ದಾನೆ. ಕೆ.ಆರ್. ನಗರ ತಾಲೂಕಿನ ಕಪ್ಪಡಿಯಲ್ಲಿ ನೆಲೆ ನಿಂತ ಈತ ಜನಮಾನಸದಲ್ಲಿ ಮಂಟೇಸ್ವಾಮಿಯಷ್ಟೇ ಪ್ರಖ್ಯಾತನಾದ ಇನ್ನೊಬ್ಬ ಸಾಂಸ್ಕೃತಿಕ ನಾಯಕನಾಗಿದ್ದಾನೆ. ಈ ರಾಚಪ್ಪಾಜಿಯು ಕೊಡೇಕಲ್ಲಿನಲ್ಲಿದ್ದಾಗ ಬರೆದ ಕಾವ್ಯಗಳಾದ ೧.ಪ್ರಭು ಚರಿತೆ ೨.ಮಾಯಾ ಸಾಂಗತ್ಯ ೩.ಅಕ್ಕಮಹಾದೇವಿ ಸಾಂಗತ್ಯ ೪.ಸೌಂದರ ನಂಬಿಯಣ್ಣನ ಚರಿತೆ ೫.ಗಿರಿಜಾಕಲ್ಯಾಣ ೬.ಕಾಯ ಸಾಂಗತ್ಯ ೭.ಸ್ವರ್ಗಾರೋಹಣ ೮.ಪಿಟ್ಟವ್ವೆ ಸಾಂಗತ್ಯ ೯ಸಂಧಿ ವಚನ ೧೦. ಸುವ್ವಿ ವಚನ ಹಾಗೂ ೪೬ ಬಿಡಿ ಪದ್ಯಗಳನ್ನು ಒಳಗೊಂಡ ಒಟ್ಟು ೪೬೦ ಪುಟಗಳ ಸಂಪಾದನಾ ಕೃತಿಯಾಗಿ ಈ ಗ್ರಂಥವನ್ನು ಪ್ರಕಟಿಸಲಾಗಿದೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಗುರುತಿಸಬಹುದಾದ ಮಹತ್ವದ ಕವಿಯಾಗಿ ರಾಚಪ್ಪಾಜಿಯನ್ನು ಇಲ್ಲಿ ಮೊದಲಬಾರಿಗೆ ಸಮಗ್ರವಾಗಿ ಶೋಧಿಸಲಾಗಿದೆ. ಲಭ್ಯವಾದ ಆತನ ಎಲ್ಲಾ ಕೃತಿಗಳನ್ನು ಇಲ್ಲಿ ಸುಧೀರ್ಘ ಪ್ರಸ್ತಾವನೆಯೊಂದಿಗೆ ಪ್ರಕಟಿಸಲಾಗಿದೆ.

೨. ವಚನ – ಸ್ವರವಚನ ಕೊಡೇಕಲ್ಲ ವಚನ ವಾಕ್ಯ ಸಂ–೩ ೧೯೯೯–೨೦೦೦ ಪೂರ್ಣ

ಕೊಡೇಕಲ್ಲ ಕಾಲಜ್ಞಾನ ಪರಂಪರೆಯ ಸಾಹಿತ್ಯ ಸ್ವರೂಪವನ್ನು ಈಗಾಗಲೇ ಪ್ರಸಿದ್ಧರಾಗಿರುವ ಸಾಹಿತ್ಯ ಪರಂಪರೆಯ ರೂಪಗಳಾದ 'ವಚನ–ಸ್ವರವಚನ' ಎಂಬ ಹೆಸರಿನಿಂದ ಈ ಕೃತಿಯನ್ನು ಸಂಪಾದಿಸಲಾಗಿದೆ. ಕೊಡೇಕಲ್ಲ ಬಸವಣ್ಣನವರ 91 ಕಾಲಜ್ಞಾನಗಳನ್ನು ಮತ್ತು ಮಂಟೇಸ್ವಾಮಿಯ 13 ಕಾಲಜ್ಞಾನಗಳನ್ನು ಹಾಗೂ ಇದೇ ಪರಂಪರೆಯ ನೀಲಮ್ಮ, ಗುಹೇಶ್ವರ, ಸಂಗಪ್ಪಯ್ಯ, ಈರಪ್ಪಯ್ಯರ ಕಾಲಜ್ಞಾನಗಳಲ್ಲದೆ ಈ ಪರಂಪರೆಯ ಬಿರುದಾವಳಿ,ಸೊಡ್ಡು ಹಾಡುಗಳನ್ನು ಕೂಡಾ ಈ ಕೃತಿಯಲ್ಲಿ ಸಂಪಾದಿಸಲಾಗಿದೆ. ಕೊಡೆಕಲ್ಲ ಪರಂಪರೆಯ ಲೋಕದಲ್ಲಿ ಉಳಿದಿರುವ ಅನೇಕ ಅಜ್ಞಾತ ಕವಿಗಳನ್ನು ಈ ಕೃತಿಯ ಮೂಲಕ ಪರಿಚಯಿಸಲಾಗಿದೆ.

೩. ಗುರುಗುಂಡ ಬಸವನ ಕಾವ್ಯ ೨೦೦೧–೦೩ ಪೂರ್ಣ

ಕೊಡೇಕಲ್ಲ ಪರಂಪರೆಯ ಮುಂದುವರಿಕೆಯ ರೂಪವಾಗಿ ನಾಗಾವಿಯ ಧರ್ಮಕಲ್ಯಾಣ ಪರಂಪರೆ ಇದ್ದು ಇದನ್ನು ಈಗಾಗಲೇ ಪ್ರಕಟಪಡಿಸಲಾಗಿದೆ. ಪ್ರಸ್ತುತ ಕಾವ್ಯವು ಈ ನಾಗಾವಿ ಪರಂಪರೆಗೆ ಸಂಬಂಧಿಸಿದುದು ಆಗಿದೆ. ಧರ್ಮಕಲ್ಯಾಣದ ಸಾಂಸ್ಕೃತಿಕ ನಾಯಕನಾದ ಗುರುಗುಂಡ ಬಸವನನ್ನು ಕುರಿತು ಈ ಕಾವ್ಯದಲ್ಲಿ ವರ್ಣಿಸಲಾಗಿದೆ. ಕರ್ತೃವಿನ ಅಜ್ಞಾತದಲ್ಲಿ

PDF created with pdfFactory trial version www.pdffactory.com

ಲಭ್ಯವಾಗಿರುವ "ಗುರುಗುಂಡ ಬಸವನ ಕಾವ್ಯ'ವನ್ನು ಇಲ್ಲಿ ಸಂಪಾದಿಸಿಲಾಗಿದೆ. ಪ್ರಸ್ತುತ ಹಸ್ತಪ್ರತಿಯು ವಿವಿ ಪ್ರಸಾರಾಂಗದಿಂದ ಮುದ್ರಣಕ್ಕೆ ಬಾರದ ಕಾರಣವಾಗಿ ಈ ಹಸ್ತಪ್ರತಿಯನ್ನು ಎಂ ಎಂ ಕಲಬುರ್ಗಿಯವರ ಕೋರಿಕೆಯ ಮೇರೆಗೆ ಅವರಿಗೆ ಒಪ್ಪಿಸಲಾಗಿ ಅವರು ಅದನ್ನು ಇತ್ತೀಚೆಗೆ ಪ್ರಕಟಪಡಿಸಿದ್ದಾರೆ.

೪. ಹರಿಹರನ ರಗಳೆಗಳು: ಸಾಂಸ್ಕೃತಿಕ ಮುಖಾಮುಖಿ  ೨೦೦೨-೦೩  ಪೂರ್ಣ

ಹರಿಹರನ ರಗಳೆಗಳನ್ನು ಕುರಿತ ವಿಚಾರ ಸಂಕಿರಣದಲ್ಲಿ ಮಂಡಿಸಿದ ಸಂಪ್ರಬಂಧಗಳ ಪರಿಷ್ಕೃತ ಲೇಖನಗಳ ರೂಪವಾಗಿ ಇದನ್ನು ಪ್ರಕಟಿಸಲಾಗಿದೆ. ಸಾಹಿತ್ಯ ಅಧ್ಯಯನ ವಿಭಾಗದ ಸಾಂಸ್ಕೃತಿಕ ಮುಖಾಮುಖಿ ಯೋಜನೆಯ ಭಾಗವಾಗಿ ಇದನ್ನು ಹೊರತರಲಾಗಿದೆ. ಹರಿಹರನ ರಗಳರಗಳನ್ನು ಹೊಸ ಓದಿಗೆ ಒಳಪಡಿಸಿದ ನಾಡಿನ ಖ್ಯಾತ ವಿದ್ವಾಂಸರ ಲೇಖನಗಳನ್ನು ಸಾದರ್ಭಿಕ ಪ್ರಸ್ತಾವನೆಯೊಂದಿಗೆ ಇದನ್ನು ಪ್ರಕಟಿಸಲಾಗಿದೆ.

೫. ಮಹಿಳಾ ಅಧ್ಯಯನ ಪತ್ರಿಕೆ ಸಂ-೬ ಸಂ,೧-೨  ೨೦೦೬-೦೭  ಪೂರ್ಣ

ಮಹಿಳಾ ಅಧ್ಯಯನ ವಿಭಾಗವು ಪ್ರಕಟಿಸುತ್ತಿರುವ ಅರ್ಧವಾರ್ಷಿಕ ಪತ್ರಿಕೆಯಾಗಿ ಇದನ್ನು ತರಲಾಗುತ್ತಿದೆ. ಈ ಸಂಪುಟವು ಮಹಿಳಾ ಅಧ್ಯಯನ ದೃಷ್ಟಿಕೋನದಿಂದ ಬರೆದ ವಿವಿಧ ವಿದ್ವಾಂಸರ ಲೇಖನಗಳಲ್ಲದೆ ಸಾರಾ ಅಬೂಬಕ್ಕರ್ ಅವರ ಸಂದರ್ಶನವನ್ನು ಒಳಗೊಂಡಿದೆ.

೧೪. ಪ್ರಗತಿಯಲ್ಲಿರುವ ಯೋಜನೆಗಳು

| | | |
|---|---|---|
| ೧. ಕರ್ನಾಟಕದ ಅನುಭಾವಿ ಪಂಥಗಳು | ೨೦೦೬-೦೯ | ಪ್ರಗತಿ |
| ೨. ಮಹಿಳೆ ಮತ್ತು ಧರ್ಮ | ೨೦೦೯-೧೦ | ಪ್ರಗತಿ |
| ೩. ಶಾಸ್ತ್ರೀಯ ಭಾಷಾ ಯೋಜನೆ, ಲಿಂಗೀಯ ಪದಕೋಶ (ವಿವರಣಾತ್ಮಕ ಮಹಿಳಾ ಪದಕೋಶ) | ೨೦೦೯-೧೦ | ಪ್ರಗತಿ |

೧೫. ಪ್ರಕಟಣೆಗಳು

೧೫.೧. ವಿಶ್ವವಿದ್ಯಾಲಯದಿಂದ ಪ್ರಕಟವಾದ ಕೃತಿಗಳು

೧. ಕರ್ನಾಟಕ ಕನ್ನಡಿ – ಇತರ ಲೇಖಕರೊಡನೆ ಪ್ರ : ಪ್ರಸಾರಾಂಗ ಕ.ವಿ.ವಿ; ೧೯೯೯

೨. ರಾಚಪ್ಪಯ್ಯನ ಕೃತಿಗಳು – (ಸಂ) ಪ್ರ : ಪ್ರಸಾರಾಂಗ ಕ.ವಿ.ವಿ; ೧೯೯೯

೩. ವಚನ – ಸ್ವರವಚನ – (ಸಂ) ಪ್ರ : ಪ್ರಸಾರಾಂಗ ಕ.ವಿ.ವಿ; ೨೦೦೦

೪. ಜೀವ ಜಗತ್ತು ವಿಶ್ವಕೋಶ – (ಸಹ ಸಂಪಾದಕ) ಪ್ರ : ಪ್ರಸಾರಾಂಗ ಕ.ವಿ.ವಿ; ೨೦೦೩

೫. ಹರಿಹರನ ಕೃತಿಗಳು : ಸಾಂಸ್ಕೃತಿಕ ಮುಖಾಮುಖಿ (ಸಂ) ಪ್ರ : ಪ್ರಸಾರಾಂಗ ಕ.ವಿ.ವಿ; ೨೦೦೩

೬. ಕನ್ನಡ ಅಧ್ಯಯನ ಪತ್ರಿಕೆ (ಸ.ಸಂ) ೧೪ ಸಂಚಿಕೆಗಳು, ಪ್ರ : ಪ್ರಸಾರಾಂಗ ಕ.ವಿ.ವಿ; ೧೯೯೯ ರಿಂದ ೨೦೦೩ ವರೆಗೆ ಒಟ್ಟು ಹದಿನಾಲ್ಕು ಪತ್ರಿಕೆಗಳು

೭. ಮಹಿಳಾ ಅಧ್ಯಯನ ಪತ್ರಿಕ್ಕೆ, ಸಂಪುಟ-೬, ಸಂಚಿಕೆ ೧-೨, ೨೦೦೬, (ಸಂಪಾದಕ)

೮. ಹೆಣ್ಣು ಮತ್ತು ಭಾಷೆ, (ಸಂ- ಇತರರೊಡನೆ), ಪ್ರ: ಯುಜಿಸಿ ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿ.ವಿ. ೨೦೦೭

೯. ಮಹಿಳೆ, ದುಡಿಮೆ ಮತ್ತು ಬಿಡುವು, (ಸಂ- ಇತರರೊಡನೆ), ಪ್ರ: ಯುಜಿಸಿ ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿ.ವಿ. ೨೦೦೭

೧೦. ಮಹಿಳಾ ಆರ್ಥಿಕತೆ, (ಸಂ- ಇತರರೊಡನೆ), ಪ್ರ: ಯುಜಿಸಿ ಮಹಿಳಾ ಅಧ್ಯಯನ ಕೇಂದ್ರ ಕನ್ನಡ ವಿ.ವಿ. ೨೦೦೭

೧೫.೨. ಖಾಸಗಿ ಸಂಸ್ಥೆಗಳಿಂದ ಪ್ರಕಟವಾದ ಕೃತಿಗಳು

೧. ಕೊಡೇಕಲ್ಲ ವಚನವಾಕ್ಯ ಸಂಗ್ರಹ (ಸಂ-ಇತರರೊಡನೆ)ಪ್ರ :ಕೊ.ಬ.ಅ.ಸಂಸ್ಥೆ, ಕೊಡೇಕಲ್ಲ ೨೦೦೪

ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟಿಸಲಾದ ಮೂರು ಸಂಪುಟಗಳಿಂದ ಆಯ್ದ ಸಂಗ್ರಹವಾಗಿ ಇದನ್ನು ಪ್ರಕಟಿಸಲಾಗಿದೆ. ಜನಸಾಮನ್ಯರನ್ನು ಲಕ್ಷ್ಯದಲ್ಲಿರಿಸಿಕೊಂಡು ಪ್ರಕಟಿಸಿದ ಜನಪ್ರಿಯ ಆವೃತ್ತಿ ಇದಾಗಿದೆ. ಕೊಡೇಕಲ್ಲ ಬಸವಣ್ಣ, ರಾಚಪ್ಪಯ್ಯ, ಮಂಟೇಸ್ವಾಮಿ, ಗುಹೇಶ್ವರ, ಸಂಗಪ್ಪಯ್ಯ, ಈರಪ್ಪಯ್ಯ, ವೀರಸಂಗಪ್ಪಯ್ಯ ಮೊದಲಾದವರ ಕಾಲಜ್ಞಾನಗಳಲ್ಲದೆ ಈ ಪರಂಪರೆಯ ಭಿನ್ನವತ್ತಳೆ ಹಾಗೂ ಬಿರುದಾವಳಿಗಳನ್ನು ಇಲ್ಲಿ ಪ್ರಕಟಿಸಲಾಗಿದೆ.

೨. ಅಮರಕಲ್ಯಾಣ – ಪ್ರ : ನುಡಿ ಪ್ರಕಾಶನ, ಎಂ.ಪಿ.ಪಿ ನಗರ, ಹೊಸಪೇಟೆ ೨೦೦೫

ಕೊಡೇಕಲ್ಲ ಕಾಲಜ್ಞಾನ ಪರಂಪರೆಯನ್ನು ಕುರಿತ ಸಂಶೋಧನಾತ್ಮಕ ಅಧ್ಯಯನವಾಗಿ ಅಮರಕಲ್ಯಾಣ ಕೃತಿಯನ್ನು ಪ್ರಕಟಿಸಲಾಗಿದೆ. ಅಮರಕಲ್ಯಾಣ ಪರಿಕಲ್ಪನೆಯ ನಿರ್ವಚನವನ್ನು ಮಾಡಿ, ಈ ಕಾಲಜ್ಞಾನಗಳು ಹೆಗೆ ಜನಸಮುದಾಯಗಳ ಆಶೋತ್ತರಗಳನ್ನು ಸಾಂಸ್ಕೃತಿಕವಾಗಿ ಮಂಡಿಸುತ್ತವೆ ಎಮಬುದನ್ನು ಉಲ್ಲೇಕಗಳೊಂದಿಗೆ ಇಲ್ಲಿ ಚರ್ಚಿಸಲಾಗಿದೆ. ಹನ್ನೆರಡನೆಯ ಶತಮಾನದ ಬಸವಣ್ಣ ಅಲ್ಲಮರ ಚಿಂತನೆಗಳನ್ನು ಕೊಡೇಕಲ್ಲ ಬಸವಣ್ಣ ತನ್ನ ಕಾಲಕ್ಕೆ ಹೇಗೆ

PDF created with pdfFactory trial version www.pdffactory.com

ಸ್ವೀಕರಿಸುತ್ತಾನೆಂಬ ಬಗೆಯನ್ನು ಸಾಂಸ್ಕೃತಿಕವಾಗಿ ವಿಮರ್ಶಿಸಲಾಗಿದೆ. ಇಡೀ ಕೊಡೇಕಲ್ಲ ಪರಂಪರೆಯು ತನ್ನ ತಾತ್ವಿಕ ಅಮರಕಲ್ಯಾಣ ಚೌಕಟ್ಟಿನಲ್ಲಿ ಸೂತ್ರೀಕರಣಗೊಂಡಿದೆ ಎಂಬುದನ್ನು ವಿವರವಾಗಿ ಮತ್ತು ಮಂಟೇಸ್ವಾಮಿ ಜನಪದ ಮಹಕಾವ್ಯ ಹಾಗೂ ಅನೇಕ ಪುರಾಣಗಳ ತೌಲನಿಕ ಅಧ್ಯಯನದೊಂದಿಗೆ ಇಲ್ಲಿನ ಚರ್ಚೆಯನ್ನು ನಡೆಸಲಾಗಿದೆ. ಕೊಡೇಕಲ್ಲಿನ ಈ ಪರಂಪರೆಯ ಸಮಗ್ರ ಚಿತ್ರಣವನ್ನು ಪ್ರಸ್ತುತ ಅಮರಕಲ್ಯಾಣ ಕೃತಿ ಒದಗಿಸುತ್ತದೆ.

೧೬. ಪ್ರಕಟಿತ ಪ್ರಮುಖ ೧೦ ಲೇಖನಗಳು

೧. ರಗಳೆಗಳ ಮರು ಓದಿಗೆ ಮೊದಲು–೨೦೦೩,ಹರಿಹರನ ರಗಳೆಗಳ ಸಾಂಸ್ಕೃತಿಕ ಮುಖಾಮುಖಿ, ಕನ್ನಡ ವಿ.ವಿ.ಹಂಪಿ
೨. ಹಸ್ತಪ್ರತಿಕಾರರ ಭಾಷಿಕ ನೆಲೆ – ೨೦೦೩, ಹಸ್ತಪ್ರತಿ ಅಧ್ಯಯನದ ಹೊಸ ಸಾಧ್ಯತೆಗಳು, ಕನ್ನಡ ವಿ.ವಿ.ಹಂಪಿ
೩. ರಾಷ್ಟ್ರೀಯತೆ ಮತ್ತು ಕೋಮುವಾದ–೨೦೦೪, ತನುವು ನೇಗಿಲ ಮಾಡಿ, ಸಂ: ಮಲ್ಲಿಕಾ ಘಂಟಿ ಕಾಗಿನೆಲೆ ಮಹಾ ಸಂಸ್ಥಾನ ಕನಕ ಗುರುಪೀಠ, ಸಿಂಧನೂರು
೪. ಮಂಟೇಸ್ವಾಮಿ ಕಾವ್ಯ ಮತ್ತು ಕೊಡೇಕಲ್ಲ ಕಾಲಜ್ಞಾನಗಳ ತೌಲನಿಕ ಸಂಕಥನ, ೨೦೦೫, ಬುಡಕಟ್ಟು ಅಧ್ಯಯನ ಪತ್ರಿಕೆ–೪, ಸಂ: ಹಿ.ಚಿ.ಬೋರಲಿಂಗಯ್ಯ, ಎ. ಎಸ್. ಪ್ರಭಾಕರ, ಕನ್ನಡ ವಿ.ವಿ
೫. ಸಾಂಸ್ಕೃತಿಕ ಪರಂಪರೆ ಮತ್ತು ಸ್ಥಿತ್ಯಂತರಗಳು : ಬಳ್ಳಾರಿ ಜಿಲ್ಲೆ – ೨೦೦೫, ಗುಲಬರ್ಗಾ ವಿ.ವಿ.
೬. ಕೊಡೇಕಲ್ಲ ರಾಚಪ್ಪಯ್ಯ, ೨೦೦೬, ಕಲಬುರ್ಗಿ ಜಿಲ್ಲಾ ಕವಿಕಾವ್ಯ ಪರಂಪರೆ, ಸಂ: ಸ್ವಾಮಿರಾವ್ ಕುಲಕರ್ಣಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಗುಲಬರ್ಗಾ
೭. ಮಹಿಳಾ ಶಿಕ್ಷಣ : ಚರ್ಚೆಯ ನೆಲೆಗಳು – ೨೦೦೬, ಮಹಿಳಾ ಅಧ್ಯಯನ ಪತ್ರಿಕೆ, ಸಂ–೬, ಸಂಚಿಕೆ೧–೨, ಕನ್ನಡ ವಿ.ವಿ.ಹಂಪಿ
೮. ಕೊಡೇಕಲ್ಲ ಪರಂಪರೆಯ ಸಾಂಸ್ಕೃತಿಕ ನೆಲೆಗಳು, ೨೦೦೬, ಬಸವ ಸಾಗರ, ಸಂ: ಈಶ್ವರಯ್ಯ ಮಠ, ಶರಣ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ, ಗುಲಬರ್ಗಾ
೯. ಭಾಷೆಯಲ್ಲಿ ಹೆಣ್ಣಿನ ಪ್ರತಿನಿಧೀಕರಣ, ೨೦೦೭, ಹೆಣ್ಣು ಮತ್ತು ಭಾಷೆ, ಸಂ:ಎಚ್.ಎಸ್.ಶ್ರೀಮತಿ, ಶಿವಾನಂದ ವಿರಕ್ತಮಠ, ಜೆ. ಕೃಷ್ಣ; ಯುಜಿಸಿ ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿ.ವಿ
೧೦. ಮಹಿಳಾ ಅಧ್ಯಯನ ಮತ್ತು ಚಳುವಳಿಗಳ ಅಂತರ್ ಸಂಬಂಧ, ೨೦೦೭, ಯುಜಿಸಿ ಮಹಿಳಾ ಅಧ್ಯಯನ ಕೇಂದ್ರ, ಮಂಗಳೂರು ವಿ.ವಿ

೧೭. ರಾಷ್ಟ್ರೀಯ ವಿಚಾರ ಸಂಕಿರಣ, ಕಮ್ಮಟಗಳಲ್ಲಿ ಭಾಗವಹಿಸುವಿಕೆ :

೧. ಕನ್ನಡಿಗರಿಗೆ ಬೇಕು ಕನ್ನಡದ್ದೇ ವ್ಯಾಕರಣ,೨೦೦೦,ರಾಜ್ಯಮಟ್ಟದ ಕಮ್ಮಟ, ಭಾಷಾಭಿವೃದ್ಧಿ ವಿಭಾಗ, ಕನ್ನಡ ವಿ.ವಿ. ಹಂಪಿ
೨. ಕನ್ನಡ ವ್ಯಾಕರಣ, ೨೦೦೧, ರಾಜ್ಯಮಟ್ಟದ ಕಮ್ಮಟ, ಭಾರತೀಯ ಭಾಷಾ ಸಂಸ್ಥೆ ಮೈಸೂರು ಮತ್ತು ಭಾಷಾಭಿವೃದ್ಧಿ ವಿಭಾಗ, ಕನ್ನಡ ವಿ.ವಿ. ಹಂಪಿ
೪. ಹಸ್ತಪ್ರತಿ ಅಧ್ಯಯನದ ಹೊಸ ಸಾಧ್ಯತೆಗಳು, ೩೦ & ೩೧–೧೨– ೨೦೦೨, ರಾಷ್ಟ್ರೀಯ ವಿಚಾರ ಸಂಕಿರಣ, ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿ.ವಿ. ಹಂಪಿ
೫. ಹರಿಹರನ ರಗಳೆಗಳು: ಸಾಂಸ್ಕೃತಿಕ ಮುಖಾಮುಖಿ, ರಗಳೆಗಳ ಮರು ಓದಿಗೆ ಮೊದಲು– ಪ್ರಸ್ತಾವನೆ, ಎಲ್ ಬಿ ಪ್ರತಿಷ್ಠಾನ ಕೋಲಾರ ಮತ್ತು ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩
೬. ಕನಕದಾಸರ ಕೀರ್ತನೆಗಳ ಅನನ್ಯತೆ, ಕಾಗಿನೆಲೆ ಮಹಾ ಸಂಸ್ಥಾನ ಕನಕ ಗುರುಪೀಠ, ಸಿಂಧನೂರು, ೨೦೦೪
೭. ಮೂರನೆಯ ಜಗತ್ತಿನ ಮಹಿಳೆ, ೧೦–೧೦–೨೦೦೪, ಯುಜಿಸಿ ಪ್ರಾಯೋಜಿತ ರಾಷ್ಟ್ರೀಯ ವಿಚಾರ ಸಂಕಿರಣ, ಗೋದುತಾಯಿ ಕಾಲೇಜು, ಗುಲಬರ್ಗಾ
೮. ಮಹಿಳಾ ಸಬಲೀಕರಣ, ೩೦–೧೧–೨೦೦೪, ರಾಜ್ಯಮಟ್ಟದ ಮಹಿಳಾ ಜಾಗೃತಿ ಮೇಳ, ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ಸಂಘ(ರಿ) ಶಹಪೂರ, ಗುಲಬರ್ಗಾ ಜಿಲ್ಲೆ
೯. ಮಹಿಳಾ ಅಧ್ಯಯನ ಮತ್ತು ಅನ್ಯ ಜ್ಞಾನ ಶಿಸ್ತುಗಳು, ೧೭–೦೨–೨೦೦೫ ರಿಂದ ೧೯–೦೨–೨೦೦೫, ರಾಜ್ಯ ಮಟ್ಟದ ಕಮ್ಮಟ, ಮಹಿಳಾ ಅಧ್ಯಯನ ವಿಭಾಗ ಕ ವಿ ಹಂ ಮತ್ತು ವಿ ಜಿ ಮಹಿಳಾ ಮಹಾವಿದ್ಯಾಲಯ ಗುಲಬರ್ಗಾ
೧೦.ಕರ್ನಾಟಕದಲ್ಲಿ ಸ್ವಸಹಾಯ ಗುಂಪುಗಳು, ಮಹಿಳಾ ವಿಷಯಗಳನ್ನು ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ, ಯುಜಿಸಿ, ಮಹಿಳಾ ಅಧ್ಯಯನ ಕೇಂದ್ರ, ಸಿ.ಎಚ್.ಎಂ ಕಾಲೇಜ್, ಉಲ್ಲಾಸನಗರ, ಠಾಣೆ ಜಿಲ್ಲೆ, ಮಹಾರಾಷ್ಟ್ರ, ೮–೦೩–೦೫ ರಿಂದ ೧೦–೦೩–೦೫
೧೧.ಕರ್ನಾಟಕದಲ್ಲಿ ಮಹಿಳಾ ಅಧ್ಯಯನ ಮತ್ತು ಚಳುವಳಿಗಳ ಅಂತರ್ ಸಂಬಂಧ– ಸಂವಾದ, ಮಹಿಳಾ ಅಧ್ಯಯನ ಮತ್ತು ಚಳುವಳಿಗಳ ಸಾಹಚರ್ಯದ ಸ್ವರೂಪ, ೨೪–೦೩–೨೦೦೫, ಯುಜಿಸಿ ಮಹಿಳಾ ಅಧ್ಯಯನ ಕೇಂದ್ರ ಮತ್ತು ಮಹಿಳಾ ಅಧ್ಯಯನ ವಿಭಾಗ, ಕ ವಿ ವಿ, ಹಂಪಿ

PDF created with pdfFactory trial version www.pdffactory.com

೧೨.ಮಹಿಳಾ ಅಧ್ಯಯನ ಸಾಧ್ಯತೆಗಳು, ೩೦-೦೩-೨೦೦೫, ಯುಜಿಸಿ ಮಹಿಳಾ ಅಧ್ಯಯನ ಕೇಂದ್ರ ಮಂಗಳೂರು ವಿಶ್ವವಿದ್ಯಾಲಯ ಕೊಣಾಜ,

೧೩.ಸ್ತ್ರೀವಾದಿ ಸಂಶೋಧನಾ ವಿಧಿವಿಧಾನಗಳು, ೨೦೦೬, ಮಹಿಳಾ ಅಧ್ಯಯನ ವಿಭಾಗ, ಕ.ವಿ ಹಂ

೧೪.ಗುಂಪು ಚರ್ಚೆ, ಜಂಡರ್ ಮತ್ತು ಸಮುದಾಯ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ, ಮಹಿಳಾ ಅಧ್ಯಯನ ವಿಭಾಗ, ಕವಿಹಂ. ೧೫=೦೩-೦೭ ರಿಂದ ೧೭-೦೩-೦೭

೧೫.ಕೈಫಿಯತ್ತುಗಳಲ್ಲಿ ವೀರಶೈವ, ವೀರಶೈವ ಆಕರಗಳು, ಕೆ ಆರ್ ಐ, ಕರ್ನಾಟಕ ವಿವಿ ಧಾರವಾಡ, ರಾಷ್ಟ್ರೀಯ ವಿಚಾರ ಸಂಕಿರಣ, ೨೫-೯-೦೮ ರಿಮದ ೨೭-೯-೦೮

೧೬.ಮಾನವ ಹಕ್ಕುಗಳು ಮತ್ತು ಲಿಂಗ ಸಮಾನತೆ, ಮಹಿಳೆ ಮತ್ತು ಹಿಂಸೆ : ಪ್ರತಿಬಂಧಕ ಸಾಧ್ಯತೆಗಳು, ಯುಜಿಸಿ ಪ್ರಾಯೋಜಿತ ರಾಷ್ಟ್ರೀಯ ವಿಚಾರ ಸಂಕಿರಣ, ೨೮,೨೯ ಅಗಷ್ಟ ೨೦೦೯, ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ

೧೭.ಮಹಿಳಾ ಮೀಸಲಾತಿ : ಒಂದು ಅವಲೋಕನ, ಮಹಿಳಾ ಮೀಸಲಾತಿ ಮಂಡನೆ : ತೊಡಕುಗಳು, ಮಹಿಳಾ ಅಧ್ಯಯನ ವಿಭಾಗ, ಕವಿಹಂ ಮತ್ತು ಎಂ ಎಸ್ ಐ ಕಾಲೇಜು, ಗುಲಬರ್ಗಾ, ೫, ೬ ಅಕ್ಟೋಬರ್, ೨೦೦೯

೧೮.ಬೀದರ ಜಿಲ್ಲಾ ಸಾಹಿತ್ಯ ಸಮ್ಮೇಳನ, ಜಾನಪದ ಸಾಹಿತ್ಯದಲ್ಲಿ ಮಹಿಳಾ ಪ್ರತಿನಿಧೀಕರಣ ಕುರಿತ ವಿಷಯ ಮಂಡನೆ, ೯, ೧೦ ನವೆಂಬರ್ ೨೦೦೯, ಬೀದರ

೧೯.ಕನ್ನಡ ಸಾಹಿತ್ಯದಲ್ಲಿ ಮಹಿಳಾ ಪ್ರತಿನಿಧೀಕರಣ, ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು, ದಿ:೪-೩-೨೦೧೦, ಗಂಗಾವತಿ

೨೦.ಕನ್ನಡ ಭಾಷೆಯ ಲಿಂಗ ಸಂಬಂಧಿ ಆಯಾಮಗಳು : ಸೃಜನಶೀಲ ಸಾಹಿತ್ಯ ಭಾಷಾಭಿವೃದ್ಧಿ ವಿಭಾಗ, ಕವಿಹಂ-ಬೆಂಗಳೂರು, ೧೯, ೨೦ ಮಾರ್ಚ್, ೨೦೧೦

೨೧.ದೇವದಾಸಿಯರ ಆರ್ಥಿಕ ದುಸ್ಥಿತಿ ಹಾಗೂ ಸರ್ಕಾರದ ನೀತಿ ನಿರೂಪಣೆಗಳು, ಮಹಿಳಾ ಅಧ್ಯಯನ ವಿಭಾಗ, ಕವಿಹಂ, ವಿದ್ಯಾರಣ್ಯ ಕ್ಯಾಂಪಸ್, ೨೮, ೨೯ ಮಾರ್ಚ್, ೨೦೧೦

೧೮. ಪಿಎಚ್.ಡಿ ಮಾರ್ಗದರ್ಶನ

| ಅಭ್ಯರ್ಥಿಗಳು | ಶೀರ್ಷಿಕೆ | ಪದವಿ ಘೋಷಿಸಿದ ದಿನಾಂಕ |
|---|---|---|
| ೧೮.೧. ಚಂದ್ರಕಲಾ ಬಿದರಿ | ಹೈದರಾಬಾದ ಕರ್ನಾಟಕ ಸಾಹಿತ್ಯದಲ್ಲಿ ಮಹಿಳಾ ಬದುಕಿನ ಪ್ರತಿನಿಧೀಕರಣ | ೨೦೦೮ |

ಪ್ರಸ್ತುತ ಮಹಾಪ್ರಬಂಧವನ್ನು ಸಾಹಿತ್ಯ ಮತ್ತು ಮಹಿಳಾ ಅಧ್ಯಯನದ ಅಂತರ್ ಶಿಸ್ತೀಯ ಅಧ್ಯಯನದ ವೈಧಾನಿಕತೆಯಲ್ಲಿ ಸಿದ್ಧಪಡಿಸಲಾಗಿದೆ. ಮುಖ್ಯವಾಗಿ ಸಾಹಿತ್ಯ ಅಧ್ಯಯನವನ್ನು ಸ್ತ್ರೀವಾದಿ ದೃಷ್ಟಿಕೋನದ ಮೂಲಕ ವಿಶ್ಲೇಷಿಸುವ ಈ ಕ್ರಮವು ಹೈದರಾಬಾದ ಕರ್ನಾಟಕ ಪ್ರದೇಶದ ಮಹಿಳಾ ಬದುಕನ್ನು ಗ್ರಹಿಸುವ ಉದ್ದೇಶವನ್ನು ಹೊಂದಿದೆ. ಹೀಗಾಗಿ ಸಾಹಿತ್ಯವು ಇಲ್ಲಿ ಮಹಿಳಾ ಬದುಕನ್ನು ಗ್ರಹಿಸಲು ಒಂದು ಪರಿಕರವಾಗಿ ನಿಂತಿದೆ. ಸಾಹಿತ್ಯ ಕೃತಿಗಳು ಮಾತ್ರವಲ್ಲದೆ ಇತರ ಆಕರಗಳಾದ ಚರಿತ್ರೆ, ಪುರಾಣ, ಜಾನಪದ, ಸಾಮಾಜಿಕ ವಾಸ್ತವ ಹೀಗೆ ವಿವಿಧ ವಲಯಗಳ ಮೂಲಗಳನ್ನು ಗಮನಿಸುತ್ತಾ ವಿಶ್ಲೇಷಣೆಗೆ ತೊಡಗಿರುವುದರಿಂದ ಮಹಾಪ್ರಬಂಧವು ಬಹುಶಿಸ್ತೀಯ ನೆಲೆಯನ್ನು ತಲುಪಲು ತಂತಾನೆ ಸಾಧ್ಯವಾಗಿದೆ.

| | | |
|---|---|---|
| ೧೮.೨. ಕಲಾವತಿ ಬಿ ಜಿ | ಜಾಹೀರಾತುಗಳಲ್ಲಿ ಮಹಿಳಾ ಪ್ರತಿನಿಧೀಕರಣ | ೨೦೦೮ |

ಭಿನ್ನ ಜ್ಞಾನಶಿಸ್ತುಗಳ ಅಂತರ ಸಂಬಂಧದ ಅಧ್ಯಯನಗಳಲ್ಲಿ ಮಾಧ್ಯಮ ಅಧ್ಯಯನ ತುಂಬಾ ಸಂಕೀರ್ಣವಾದದ್ದು ಆಗಿದೆ. ಲಿಂಗಶ್ರೇಣೀಕರಣದ ಸಮಾಜ ವ್ಯವಸ್ಥೆಯಲ್ಲಿ 'ಪುರುಷ ಮಾನದಂಡ'ಗಳ ಚೌಕಟ್ಟುಗಳು ಎಲ್ಲಾ ಜ್ಞಾನಶಾಖೆಗಳಲ್ಲೂ ಮುಖ್ಯ ವಾಹಕಗಳಾಗಿರುತ್ತವೆ. ಹೀಗಾಗಿಯೇ ಸ್ತ್ರೀವಾದಿ ಮಾಧ್ಯಮ ಅಧ್ಯಯನದಲ್ಲಿ 'ಮೇಲ್ ಗೇಜ್'ನ ರಾಜಕಾರಣವನ್ನು ಗುರುತಿಸಿ, ವಿಶ್ಲೇಷಣೆಗೆ ಒಳಪಡಿಸಲಾಗುತ್ತದೆ. ಪ್ರಸ್ತುತ ಜಾಹೀರಾತುಗಳ ಅಧ್ಯಯನದಲ್ಲಿಯೂ ಈ ಲಿಂಗಶ್ರೇಣೀಕರಣದ ರಾಜಕಾರಣವನ್ನು ಅನಾವರಣ ಮಾಡಲಾಗಿದೆ. ಜಾಹೀರಾತುಗಳಲ್ಲಿ ಪ್ರತಿನಿಧಿತವಾದ ಲಿಂಗಾಧಾರಿತ ಪಾತ್ರಗಳನ್ನು ಕೌಟುಂಬಿಕ ಹಾಗೂ ಕೌಟುಂಬಿಕೇತರ ವಲಯಗಳಲ್ಲಿ ವರ್ಗೀಕರಿಸಿಕೊಂಡು ಅದರ ಸ್ವರೂಪವನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಇಲ್ಲಿ ಪ್ರತಿನಿಧಿತವಾದ ಪುರುಷ/ಸ್ತ್ರೀ ಪಾತ್ರಗಗಳ ಸ್ಥಿರ ಮಾದರಿ ಸ್ವರೂಪ ಹಾಗೂ ಲಿಂಗಸಂಬಂಧಗಳನ್ನು ತುಲನಾತ್ಮಕವಾಗಿ ಚರ್ಚಿಸಲಾಗಿದೆ.

ಜಾಹೀರಾತುಗಳು ಸಮಾಜ ವ್ಯವಸ್ಥೆಯಲ್ಲಿರುವ ಲಿಂಗಶ್ರೇಣೀಕರಣದ ಸ್ವರೂಪವನ್ನು ಬದಲಾಯಿಸಲು ಇಷ್ಟಪಡದೆ ಅಲ್ಲಿರುವ ವ್ಯವಸ್ಥೆಯನ್ನೇ ಮತ್ತೆ ಮತ್ತೆ ಸ್ಥಿರೀಕರಿಸುವ ಹಾಗೂ ದೃಢೀಕರಿಸುವ ಮದರಿಯನ್ನು ಅನುಸರಿಸಿ ತಮ್ಮ ಲಾಭಕೋರತನವನ್ನು ಪ್ರಕಟಪಡಿಸುತ್ತವೆ. ಬಂಡವಾಳಶಾಹಿ ಪ್ರವೃತ್ತಿಯನ್ನು ಸ್ತ್ರೀತ್ವ, ಪುರುಷತ್ವಗಳ ಲಿಂಗರಾಜಕಾರಣದ ಯಥಾಸ್ಥಿ ಸ್ವರೂಪದಲ್ಲೇ ಗ್ರಹಿಸಿ ಪ್ರತಿನಿಧಿಸುತ್ತವೆ. ಜಾಹಿರಾತು ಈ ಹೊತ್ತಿನ ವರ್ತಮಾನದಲ್ಲಿ ಅದರಲ್ಲೂ ಚಲನಶೀಲ ಸಾಮಾಜಿಕ ಬದುಕಿನ ಮೇಲೆ ಒತ್ತಡ ಹೇರುವ ಪ್ರಭಾವೀ ಮಾಧ್ಯಮವಾಗಿರುವುದರಿಂದ ಅದರ ಪರಿಣಾಮಕಾರೀ ಸ್ವರೂಪ ಹಾಗೂ ಲಿಂಗೀಯ ರಾಜಕಾರಣದ ಸೂಕ್ಷ್ಮ ಸಂಬಂಧಗಳನ್ನು ಪ್ರಸ್ತುತ ಮಹಾಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ.

| | | |
|---|---|---|
| ೧೮.೩. ನಾಗರಾಜ ಎಸ್ | ಇಪ್ಪತ್ತನೆಯ ಶತಮಾನದ ಕೊನೆಯ ದಶಕಗಳಲ್ಲಿ ಸಂಸ್ಕೃತಿಯ ಪ್ರಶ್ನೆ | ೨೦೦೮ |

ಇಪ್ಪತ್ತನೆಯ ಶತಮಾನದ ಕೊನೆಯ ದಶಕಗಳಲ್ಲಿ ಸಂಸ್ಕೃತಿ ಪ್ರಶ್ನೆ (ಸಣ್ಣಕತೆಗಳನ್ನು ಆಧರಿಸಿ) ಎಂಬ ಪಿಎಚ್.ಡಿ ಮಹಾಪ್ರಬಂಧದಲ್ಲಿ ಎಸ್. ನಾಗರಾಜ್ ಅವರು ಸಂಸ್ಕೃತಿ ಚರ್ಚೆಯ ಪ್ರಶ್ನೆಗಳನ್ನು ಇಟ್ಟುಕೊಂಡು ಕಳೆದ ಶತಮಾನದ ಮೂರು

PDF created with pdfFactory trial version www.pdffactory.com

ದಶಕಗಳ ಸಣ್ಣಕಥಾ ಸಾಹಿತ್ಯ ಲೋಕವನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಕಳೆದ ಶತಮಾನದ ಸಾಂಸ್ಕೃತಿಕ ವಿದ್ಯಮಾನಗಳನ್ನು ಸ್ಥೂಲವಾಗಿ ವಿವರಿಸಿಕೊಂಡು ಅಧ್ಯಯನದ ಭೂಮಿಕೆಯನ್ನು ರೂಪಿಸಿಕೊಂಡಿದ್ದಾರೆ. ಮುಖ್ಯವಾಗಿ ಸಣ್ಣಕಥಾ ಸಾಹಿತ್ಯವು ಆಯಾ ಕಾಲದ ಸಾಂಸ್ಕೃತಿಕ ವಿದ್ಯಮಾನಗಳಿಗೆಲ್ಲ ಹೇಗೆ ಪ್ರತಿಕ್ರಯಿಸಿದೆ ಎಂಬುದನ್ನು ಅರ್ಥೈಸಿಕೊಳ್ಳಲು ಈ ಅಧ್ಯಯನವನ್ನು ನಡೆಸಲಾಗಿದೆ. ಮೂರು ದಶಕಗಳ ವ್ಯಾಪ್ತಿಯಲ್ಲದೆ ಇತ್ತೀಚಿನವರೆಗಿನ ಸಣ್ಣಕತೆಗಳ ಒಟ್ಟು ಬರಹ ಸಮೂಹವನ್ನು ಕಣ್ಣಮುಂದೆ ಹಾಕಿಕೊಂಡು ಅಧ್ಯಯನವನ್ನು ನಡೆಸುವುದು ಒಂದು ಸಾಹಸವೇ ಆದರೂ ಸ್ವತಃ ಕತೆಗಾರರಾದ ಸಂಶೋಧಕರು ಇದನ್ನು ತುಂಬಾ ಓದಿನ ಕಾಳಜಿ ಮತ್ತು ಶ್ರದ್ಧೆಯಿಂದ ನಡೆಸಿದ್ದಾರೆ. ಇದು ಮಹಾ ಪ್ರಬಂಧದ ಆನ್ವಯಿಕ ವಿಶ್ಲೇಷಣೆಯಲ್ಲಿ ಮತ್ತೆಮತ್ತೆ ಗಮನಕ್ಕೆ ಬರುವ ಸತ್ಯಾಂಶವಾಗಿದೆ. ಇಡೀ ಸಣ್ಣಕಥಾ ಸಾಹಿತ್ಯ ಪ್ರಕಾರವನ್ನು ಸಮಗ್ರವಾಗಿ ಓದಿದ ಕಾರಣದಿಂದಾಗಿ ಇವರಿಗೆ ಕಥಾಸಾಹಿತ್ಯದ ಬರವಣಿಗೆಯ ಮೇಲೆ ಒಂದು ಅಧಿಕೃತ ಗ್ರಹಿಕೆ ಸಾಧ್ಯವಾಗಿದೆ. ಹೀಗಾಗಿ ವಿವಿಧ ಲೇಖಕರ ಎಲ್ಲಾ ಕಥನಗಳ ಸಣ್ಣ ಸಣ್ಣ ವಿವರಗಳಿಂದ ಇವರು ವಿಶ್ಲೇಷಣೆಯನ್ನು ಬೆಳೆಸುವುದು ಅಚ್ಚರಿಯನ್ನುಂಟುಮಾಡುತ್ತದೆ. ಈ ಸಂಗತಿ ಮಹಾಪ್ರಬಂಧದ ಗುಣಾತ್ಮಕ ಅಂಶವಾಗಿದೆ.

೧೮.೪. ಮಲ್ಲಿಕಾರ್ಜುನ ಎಂ ಸಿ	ಆಧುನಿಕ ಕಥನ ಸಾಹಿತ್ಯದಲ್ಲಿ ಭೂ ಹೋರಾಟದ ಪ್ರತಿನಿಧೀಕರಣ	೨೦೦೮

ಪ್ರಸ್ತುತ ಪಿಎಚ್.ಡಿ ಮಹಾ ಪ್ರಬಂಧವು ಆಧುನಿಕ ಕಥನ ಸಾಹಿತ್ಯದಲ್ಲಿ ಪ್ರತಿನಿಧಿತವಾದ ಭೂಹೋರಾಟದ ಸ್ವರೂಪವನ್ನು ಸಂಶೋಧಿಸುವ ಚೌಕಟ್ಟಿಗೆ ಸಂಬಂಧಪಟ್ಟಿರುವುದಾಗಿದೆ. ಕಥನ ಎಂಬುದನ್ನು ಇಲ್ಲಿ ಕಥೆ ಮತ್ತು ಕಾದಂಬರಿಗಳನ್ನು ಒಳಗೊಳಿಸಿ ಗ್ರಹಿಸಲಾಗಿದೆ. ಇಪ್ಪತ್ತನೆಯ ಶತಮಾನದ ಒಟ್ಟು ಕಥನ ಸಾಹಿತ್ಯವನ್ನು ಅಧ್ಯಯನ ಮಾಡುವುದು ಇಲ್ಲಿನ ಉದ್ದೇಶವಾಗಿರುವುದಲ್ಲದೆ ಭೂಹೋರಾಟಕ್ಕೆ ಸಂಬಂಧಿಸಿದ ಚಳುವಳಿಗಳು ಮತ್ತು ಭೂಸಂಬಂಧಿ ಕಾನೂನುಗಳನ್ನು ಕೂಡಾ ಇದರ ಒಟ್ಟೊಟ್ಟಿಗೆ ಗಮನಿಸಿರುವುದು ಕಂಡುಬರುತ್ತದೆ. ಜೊತೆಗೆ ಈ ಬಗೆಗೆ ಇರುವ ಚಿಂತನೆಗಳ ವೈವಿಧ್ಯ ಸ್ವರೂಪವನ್ನು ಪ್ರತ್ಯೇಕವಾಗಿ ಸಾರಾಂಸೀಕರಿಸಿ ಒದಗಿಸಲಾಗಿದೆ. ವರ್ತಮಾನದ ಸಂದರ್ಭದಲ್ಲಿ ರೈತರು ಎದುರಿಸುತ್ತಿರುವ ಸಂಕಷ್ಟಗಳನ್ನು ವಿವರಿಸಿಕೊಳ್ಳುವ ಭಾಗವಾಗಿಯೂ ಮಹಾಪ್ರಬಂಧದ ಅನನ್ಯತೆಯನ್ನು ಗುರುತಿಸಬಹು ದಾಗಿದೆ. ರೈತ ಮತ್ತು ಭೂಪ್ರಶ್ನೆಗಳನ್ನು ಸಾಮಾಜಿಕ ಚಳುವಳಿಗಳಲ್ಲಿ ಹಾಗೂ ಬೌದ್ಧಿಕ ಚಿಂತನಲೋಕದಲ್ಲಿ ಹೇಗೆ ಗ್ರಹಿಸಲಾಗುತ್ತಿದೆ. ಈ ವಸ್ತುಸ್ಥಿತಿಯನ್ನು ಆಧುನಿಕ ಸೃಜನಶೀಲ ಬರವಣಿಗೆಯಾದ ಕಥನ ಸಾಹಿತ್ಯದಲ್ಲಿ ಹೇಗೆ ಪ್ರತಿಕ್ರಿಯಿಸುತ್ತಾ ಬರಲಾಗಿದೆ ಎಂಬುದರ ಸ್ವರೂಪವನ್ನು ವಿಶ್ಲೇಷಿಸಲು ಈ ಅಧ್ಯಯನವು ಉದ್ದೇಶಿಸಿದೆ.

೧೮.೫. ರಾಮು ಕಲಾಲ	ಪಂಚಾಯತ್ ರಾಜ ವ್ಯವಸ್ಥೆಯಲ್ಲಿ ದಲಿತ ಮಹಿಳಾ ಪ್ರತಿನಿಧೀಕರಣ	೨೦೦೯

ಗ್ರಾಮ, ತಾಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸ್ಥಳೀಯ ಆಡಳಿತ ಎಂಬ ವಿಕೇಂದ್ರಿತ ಮಾದರಿಯಲ್ಲಿ ನಡೆಸಿಕೊಂಡು ಬರಲಾಗುತ್ತದೆಯಷ್ಟೆ. ಕೇಂದ್ರ ಮಟ್ಟದಲ್ಲಿ ಮಾಡಲಾಗದ ಮಹಿಳಾ ಮೀಸಲಾತಿಯನ್ನು ಈ ಸ್ಥಳೀಯ ಪಂಚಾಯತ್ ವ್ಯವಸ್ಥೆಯಲ್ಲಿ ತರಲಾದ ರಾಜಕಾರಣದೊಟ್ಟೊಟ್ಟಿಗೆ ಇಲ್ಲಿ ದಲಿತ ಮಹಿಳೆಯರಿಗೆ ಸಿಕ್ಕ ಈ ಅಧಿಕಾರ ರಾಜಕಾರಣದ ಸ್ವರೂಪವನ್ನು ವಿವರವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಸಾಂಪ್ರದಾಯಿಕ ಜಾತಿ ಶ್ರೇಣೀಕರಣದ ಪಾಳೇಗಾರಿ ನಂಬಿಕೆಗಳು ಹಾಗೂ ಪಿತೃಪ್ರಧಾನ ವ್ಯವಸ್ಥೆಗಳ ಒತ್ತಡದಲ್ಲಿ ಕೊಪ್ಪಳ ಜಿಲ್ಲೆಯ ದಲಿತ ಮಹಿಳೆಯರು ಎದುರಿಸುತ್ತಿರುವ ಸಂಕೀರ್ಣ ಸವಾಲುಗಳನ್ನು ಸಾಂಸ್ಕೃತಿಕ ವಿಮರ್ಶೆಗೆ ಇಲ್ಲಿ ಒಳಪಡಿಸಲಾಗಿದೆ.

೧೮.೬. ಉಮಾದೇವಿ ಎಸ್ ಒಡೆಯರ, ಗ್ರಾಮೀಣ ಮಹಿಳೆಯ ಸಬಲೀಕರಣ : ಒಂದು ಸ್ತ್ರೀವಾದಿ ಅಧ್ಯಯನ, (ಹೈದರಾಬಾದ ಕರ್ನಾಟಕವನ್ನು ಅನುಲಕ್ಷಿಸಿ)	೨೦೧೦

ಮಹಿಳಾ ಅಧ್ಯಯನ ಮತ್ತು ಸಮಾಜಶಾಸ್ತ್ರಗಳ ಅಂತರ್ ಶಿಸ್ತೀಯ ಅಧ್ಯಯನ ವಿಧಾನಕ್ಕೆ ಸಂಬಂಧಿಸಿದ ಈ ಮಹಾಪ್ರಬಂಧವು ಗ್ರಾಮೀಣ ಮಹಿಳಾ ಬದುಕಿನ ಅನೇಕ ಮಗ್ಗುಲುಗಳ ಮೇಲೆ ಬೆಳಕು ಚೆಲ್ಲಲು ಪ್ರಯತ್ನಿಸಿದೆ. ಮುಖ್ಯವಾಗಿ ಹೈದರಾಬಾದ ಕರ್ನಾಟಕ ಪ್ರದೇಶದ ಬೀದರ, ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳ ಮಾಹಿತಿ ಸಂಗ್ರಹಣೆಯನ್ನು ಈ ಮಹಾಪ್ರಬಂಧವು ಆಶ್ರಯಿಸಿದೆ. ಈ ಮೂರು ಜಿಲ್ಲೆಗಳಲ್ಲಿನ ಮೂವತ್ತು ಸ್ವಸಹಾಯ ಸಂಘಗಳನ್ನು ಆಯ್ಕೆಮಾಡಿಕೊಂಡು ಅಲ್ಲಿ ಸುಮಾರು ಮುನ್ನೂರು ಜನ ಸಂಘದ ಪ್ರತಿನಿಧಿಗಳನ್ನು ಸಂದರ್ಶಿಸಿ ಮಾಹಿತಿಯನ್ನು ಪಡೆಯಲಾಗಿದೆ. ಸ್ವಸಹಾಯ ಸಂಘಗಳನ್ನು ತಾಲೂಕಿನ ವ್ಯಾಪ್ತಿಯಲ್ಲಿ ಪಂಚಾಯ್ತಿ ಗ್ರಾಮಗಳನ್ನು ಆಯ್ಕೆಮಾಡಿಕೊಂಡು, ಪೂರ್ಣ ಪ್ರಮಾಣದಲ್ಲಿ ಗ್ರಾಮೀಣ ಮಾಹಿತಿಯನ್ನೇ ಸಂಶೋಧಕರು ಬಳಸಿರುವುದು ಮಾಹಿತಿ ಸಂಗ್ರಹಣೆಯ ದೃಷ್ಟಿಯಿಂದ ಮಹತ್ವದ ಅಂಶವಾಗಿದೆ. ಇದಕ್ಕೆ ಪೂರಕವಾಗಿ ಸ್ವಸಹಾಯ ಸಂಘಗಳ ಸ್ಥಾಪನೆಯ ಚಾರಿತ್ರಿಕ ಹಿನ್ನೋಟವನ್ನು ಹಾಗೂ ಕರ್ನಾಟಕದಲ್ಲಿ ಅದರ ಬೆಳವಣಿಗೆಯ ಸ್ವರೂಪವನ್ನು ಕುರಿತು ವಿಶ್ಲೇಷಣೆಯನ್ನು ಇಲ್ಲಿ ಮಾಡಲಾಗಿದೆ.

೧೮.೭. ಸುಕನ್ಯಾ ಎಸ್ ಹಾವನೂರ	ದಲಿತ ಬಂಡಾಯ ಸಾಹಿತ್ಯದಲ್ಲಿ ಮಹಿಳಾ ಪ್ರತಿನಿಧೀಕರಣ	೨೦೧೦

ಸಿಮೋನ್ ದಿ ಬುವಾ ಗುರುತಿಸುವ ಹಾಗೆ ಸಾಮಾಜಿಕ ವಾಸ್ತವದಲ್ಲಿ ಮಹಿಳೆ ಎರಡನೆಯ ದರ್ಜೆಯವಳಾಗಿದ್ದಾಳೆ ಎಂಬ ಶೋಧನೆಯನ್ನು ಕನ್ನಡ ದಲಿತ ಬಂಡಾಯ ಸಾಹಿತ್ಯ ಕ್ಷೇತ್ರದ ಪ್ರತಿನಿಧೀಕರಣದ ಮುಖಾಂತರ ಪರಿಶೀಲನೆಯನ್ನು ನಡೆಸುವುದು ಈ ಮಹಾಪ್ರಬಂಧದ ಆಶಯವಾಗಿದೆ. ಮೂಲತ ಚಳುವಳಿಯ ಹಿನ್ನೆಲೆಯಲ್ಲಿ ಹುಟ್ಟಿ ಬಂದ ದಲಿತ, ಬಂಡಾಯ ಸಾಹಿತ್ಯದಲ್ಲಿ ಯಾವ ರೀತಿಯಲ್ಲಿ ಮಹಿಳೆಯನ್ನು ಪರಿಗಣಿಸಲಾಗಿದೆ ಎಂಬ ಕುತೂಹಲವನ್ನು ಈ ಅಧ್ಯಯನದ ಹಿಂದೆ ಇರಿಸಿಕೊಂಡು ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

PDF created with pdfFactory trial version www.pdffactory.com

ಸಾಮಾಜಿಕವಾದ ಬದುಕಿನ ವಾಸ್ತವದಲ್ಲಿ ಅಸಮಾನತೆ ಮತ್ತು ಭೇದತ್ವಗಳು ಎಲ್ಲಾ ವಲಯಗಳಲ್ಲಿ ಮನೆಮಾಡಿಕೊಂಡಿವೆ. ವರ್ಗ, ವರ್ಣ, ಜಾತಿ, ಜನಾಂಗ ಮತ್ತು ಲಿಂಗ ಶ್ರೇಣೀಕರಣಗಳು ಮನುಷ್ಯ ಮನುಷ್ಯರಲ್ಲಿ ತರತಮಗಳನ್ನು ಸೃಷ್ಟಿಸಿವೆ. ಕಾಲಕಾಲಕ್ಕೆ ಇವು ಪುನರಾವರ್ತನೆಯಾಗುತ್ತಾ ನಡೆಯುತ್ತಿವೆ. ಹೀಗಾಗಿ ಕನ್ನಡದ ದಲಿತ ಬಂಡಾಯ ಸಾಹಿತ್ಯ ಪರಂಪರೆಯಲ್ಲಿ ಜಾತಿ ಮತ್ತು ವರ್ಗ ಶ್ರೇಣೀಕರಣವನ್ನು ವಿರೋಧಿಸುವ ಸಾಂಸ್ಕೃತಿಕ ರಾಜಕಾರಣವನ್ನು ಮಂಡಿಸಲಾಗಿದೆ. ಇಂತಹ ಬದ್ಧತೆಯಿಂದ ಸೃಷ್ಟಿಯಾದ ಸಾಹಿತ್ಯ ಪರಂಪರೆಯಲ್ಲಿಯಾದರೂ ಲಿಂಗ ಶ್ರೇಣೀಕರಣದ ಪ್ರಶ್ನೆ ಬಗೆಹರಿದಿದೆಯೇ ಎಂಬ ಶೋಧ ಈ ಅಧ್ಯಯನಕ್ಕಿದೆ.

೧೮.೮. ಅಕ್ಕಮ್ಮ ಟಿ. ಅಸಂಘಟಿತ ವಲಯದಲ್ಲಿ ಮಹಿಳಾ ಕೆಲಸಗಾರರು: ಒಂದು ಅಧ್ಯಯನ ೨೦೧೦ ರಲ್ಲಿ ಸಲ್ಲಿಕೆ

೧೯. ಎಂ.ಫಿಲ್ ಮಾರ್ಗದರ್ಶನ

| ಅಭ್ಯರ್ಥಿಗಳು | ಶೀರ್ಷಿಕೆ | ಪದವಿ ಘೋಷಿಸಿದ ದಿನಾಂಕ |
|---|---|---|
| ೧. ಕಾವೇರಿ ಪಿ. ಸಾಗರ್ | ಗುಲಬರ್ಗಾ ಕೊಳಚೆ ಪ್ರದೇಶದ ಮಹಿಳಾ ಬದುಕು, | ೨೦೦೭ |

ಹೈದರಾಬಾದ ಕರ್ನಾಟಕದ ಮುಖ್ಯ ಮಹಾ ನಗರವಾದ ಗುಲಬರ್ಗಾದಲ್ಲಿ ಬೆಳೆಯುತ್ತಿರುವ ಕೊಳಚೆ ಪ್ರದೇಶವನ್ನು ಕುರಿತು ಪ್ರಸ್ತುತ ಸಂಪ್ರಬಂಧದಲ್ಲಿ ಅಧ್ಯಯನ ಮಾಡಲಾಗಿದೆ. ಮಹಾನಗರವಾಗಿ ಬೆಳೆಯುತ್ತಿರುವ ಈ ಜಿಲ್ಲಾ ಕೇಂದ್ರದಲ್ಲಿ ಕೊಳಚೆ ಪ್ರದೇಶವೂ ಅಷ್ಟೇ ಪ್ರಮಾಣದಲ್ಲಿ ಬೆಳೆಯುತ್ತಿದೆ. ಬಡಾವಣೆಗಳು ಬೆಳೆದಂತೆ ಆ ಬಡಾವಣೆಯ ತಾಜ್ಯವಸ್ತು ಕೇಂದ್ರಗಳಾಗಿ ಕೊಳಚೆಗಳೂ ಬೆಳೆಯುತ್ತಿವೆ. ಅಲ್ಲಿನ ಜನಸಾಮಾನ್ಯರ ಬದುಕು ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳ ಬದುಕು ನಾಗರಿಕ ಸೌಲಭ್ಯದಿಂದ ದೂರವಾಗುತ್ತಾ ಅನೇಕ ಸಾಂಕ್ರಾಮಿಕ ರೋಗ ರುಜಿನಗಳಿಗೆ ತುತ್ತಾಗುತ್ತಾ, ಹೇಗೆ ಸಮಸ್ಯೆಗಳಿಗೆ ಒಳಗಾಗುತ್ತಿದ್ದಾರೆ ಎಂಬುದನ್ನು ವಿವರವಾಗಿ ಇಲ್ಲಿ ಅಧ್ಯಯನ ಮಾಡಲಾಗಿದೆ.

| | | |
|---|---|---|
| ೨. ಉಮೇಶ ಬಸಪ್ಪ ಕಾತರಕಿ | ಬಿಸರಳ್ಳಿಯ ದೇವದಾಸಿ ಪದ್ಧತಿ : ಒಂದು ಅಧ್ಯಯನ | ೨೦೦೭ |

ಕೊಪ್ಪಳ ಜಿಲ್ಲೆಯ ಬಿಸರಳ್ಳಿ ಗ್ರಾಮದ ದೇವದಾಸಿ ಪದ್ದತಿಯು ಮರುಳಸಿದ್ದೇಶ್ವರ ಮಠದ ಹಿನ್ನೆಲೆಯಿಂದ ಬಂದ ಸಂಪ್ರದಾಯವಾಗಿದ್ದು , ಈ ಪ್ರಾಚೀನ ದೇವದಾಸಿ ಪದ್ಧತಿಯು ಈ ಸ್ಥಳದಲ್ಲಿ ಹೇಗೆ ಮುಂದುವರಿದುಕೊಂಡು ಬಂದಿದೆ. ಈ ಪರಂಪರೆಯಲ್ಲಿ ಬಂದಿರುವ ದೇವದಾಸಿಯರ ಸಮಸ್ಯೆಗಳೇನು ಹಾಗೂ ಇದಕ್ಕೆ ಪರಿಹಾರವೇನು ಎಂಬುದರ ವಿಶ್ಲೇಷಣಾತ್ಮಕ ಅಧ್ಯಯನ ಪ್ರಸ್ತುತ ಸಂಪ್ರಬಂಧದ ಚೌಕಟ್ಟಾಗಿದೆ.

| | | |
|---|---|---|
| ೩. ಬಾಣಗಾರ ಗೌರಮ್ಮ | ಮಹಿಳಾ ಕಂಡಕ್ಟರ್‌ಗಳ ಸ್ಥಿತಿಗತಿ ಹಾಗೂ ಸಮಸ್ಯೆಗಳು | ೨೦೦೭ |

ಮಹಿಳಾ ಕಂಡಕ್ಟರ್‌ಗಳ ಬಗೆಗಿನ ಸಾಮಾಜಿಕ ದೃಷ್ಟಿಕೋನ ಹಾಗೂ ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ. ಮಹಿಳಾ ಕಂಡಕ್ಟರ್‌ಗಳ ಬಗೆಗಿರುವ ಸಾಮಾಜಿಕ ಪೂರ್ವಾಗ್ರಹಗಳು, ಮಾನಸಿಕ ಒತ್ತಡಗಳು, ಪೂರಕ ಸಹಕಾರದ ಕೊರತೆ, ದೈಹಿಕ ಶ್ರಮದ ಕಾರಣಕ್ಕಾಗಿ ಉಂಟಾಗುವ ಆರೋಗ್ಯದ ಸಮಸ್ಯೆಗಳು ಹಾಗೂ ಕೌಟುಂಬಿಕ ಸಮಸ್ಯೆಗಳನ್ನು ಈ ಅಧ್ಯಯನದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

| | | |
|---|---|---|
| ೪. ರಜಿಯಾಬಾನು ಕೆ ಎಸ್ | ಮುಸ್ಲಿಂ ಮಹಿಳೆಯ ಸಾಮಾಜಿಕ ಬದುಕು | ೨೦೦೮ |

ಮುಸ್ಲಿಂ ಮಹಿಳೆಯರು ಎದುರಿಸುತ್ತಿರುವ ಸಾಮಾಜಿಕ, ಧಾರ್ಮಿಕ ಹಾಗು ವೈವಾಹಿಕ ಸಮಸ್ಯೆಗಳನ್ನು ಪ್ರಸ್ತುತ ಸಂಪ್ರಬಂದದಲ್ಲಿ ಅಧ್ಯಯನ ಮಾಡಲಾಗಿದೆ. ಪುರುಷ ಕೇಂದ್ರಿತವಾದ ಸಮಾಜ ವ್ಯವಸ್ಥೆ ಹಾಗೂ ಧಾರ್ಮಿಕ ದೃಷ್ಟಿಧೋರಣೆಗಳಿಂದಾಗಿ ಮುಸ್ಲಿಂ ಮಹಿಳಾ ಬದುಕು ಎದುರಿಸುತ್ತಿರುವ ಸಮಸ್ಯೆಗಳನ್ನು ಸಾಂಸ್ಕೃತಿಕ ಮಿಮರ್ಶೆಗೆ ಇಲ್ಲಿ ಒಳಗುಮಾಡಲಾಗಿದೆ.

| | | |
|---|---|---|
| ೫. ವೀಣಾ ಕುಲಕರ್ಣಿ | ಬ್ರಾಹ್ಮಣ ಧರ್ಮದಲ್ಲಿನ ಮಹಿಳಾ ಚಹರೆ | ೨೦೦೮ |

ಯಾವುದೇ ಧರ್ಮವು ಮಹಿಳಾಪರವಾಗಿ ಯೋಚಿಸಿದ ಉದಾಹರಣೆಯು ಚರಿತ್ರೆಯಲ್ಲಿ ಲಭ್ಯವಾಗುವುದಿಲ್ಲ. ಈ ದೃಷ್ಟಿಕೋನದಿಂದ ಬ್ರಾಹ್ಮಣ ಮಹಿಳೆಯ ಸಾಮಾಜಿಕ ಚಹರೆಯನ್ನು ಗ್ರಹಿಸುವ ನೆಲೆಯಿಂದ ಪ್ರಸ್ತುತ ಅಧ್ಯಯನವನ್ನು ನಡೆಸಲಾಗಿದೆ. ಪ್ರಾಚೀನ ಸನಾತನ ಕಾಲಕ್ಕೆ ಶ್ರೇಷ್ಠವೆನ್ನಿಸಿಕೊಂಡಿದ್ದ ಬ್ರಾಹ್ಮಣ ವ್ಯವಸ್ಥೆಯಲ್ಲೂ ಮಹಿಳೆಯ ಬಗೆಗೆ ತರತಮವಾದ ದೃಷ್ಟಿ ಧೋರಣೆಗಳನ್ನು ಆಚರಿಸಿಕೊಂಡು ಬಂದ ವ್ಯವಸ್ಥೆಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

| | | |
|---|---|---|
| ೬. ಭುವನೇಶ್ವರಿ ಗುನ್ನಳ್ಳಿ | ಕೊರವ ಮಹಿಳೆಯರ ಬದುಕು ಮತ್ತು ಬವಣೆ | ೨೦೦೯ |

ಕೊಪ್ಪಳ ಜಿಲ್ಲೆಯಲ್ಲಿರುವ ಕುಂಚಿಕೊರವ ಜನಾಂಗವು ಅಲೆಮಾರಿ ಜನಾಂಗವಾದ ಕೊರವರ ಮೂಲದಲ್ಲಿಯೇ ಗುರುತಿಸಿಕೊಳ್ಳುವ ಸಮುದಾಯವಾಗಿದೆ. ಈ ಜನಾಂಗದ ಮಹಿಳೆಯರು ತಮ್ಮ ಭಿಕ್ಷಾಟನ ವೃತ್ತಿಯ ಜೊತೆಗೆ ಕೂದಲು ಆಯುವ ಹಾಗೂ ಪೊರಕೆ–ಚಾಪೆಗಳನ್ನು ತಯಾರಿಸಿ ಊರೂರು ಅಲೆದು ಮಾರಾಟ ಮಾಡಿ ಹೊಟ್ಟೆಹೊರೆದುಕೊಳ್ಳುತ್ತಾರೆ. ಇಂತಹ ಅಲೆಮಾರಿ ಬದುಕಿನೊಟ್ಟಿಗೆ ತಮ್ಮದೇ ಸಮುದಾಯದ ಪುರುಷ ವರ್ಗದಿಂದ ಹೇಗೆ ಸಮಸ್ಯೆಗಳಿಗೆ ಒಳಗಾಗುತ್ತಿದ್ದಾರೆ ಎಂಬುದನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

PDF created with pdfFactory trial version www.pdffactory.com

೭. ಲೋಕೇಶ ಉನ್ನತ ಶಿಕ್ಷಣದಲ್ಲಿ ಪರಿಶಿಷ್ಟ ಜಾತಿಯ ಮಹಿಳಾ ವಿದ್ಯಾರ್ಥಿನಿಯರು: ಒಂದು ಅಧ್ಯಯನ ೨೦೦೯

ಈ ಅಧ್ಯಯನವು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಉನ್ನತ ಶಿಕ್ಷಣ ಮಾಡುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಯರನ್ನು ಕುರಿತಾಗಿದೆ. ಇಂತಹ ವಿದ್ಯಾರ್ಥಿನಿಯರು ಎದುರಿಸುತ್ತಿರುವ ಸಮಸ್ಯೆಗಳು ಯಾವವು ಮತ್ತು ಇದರ ಬಿಕ್ಕಟ್ಟುಗಳೇನು ಹಾಗೂ ಇದಕ್ಕೆ ಪರಿಹಾರವೆನೆಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

೨೦. ಪಡೆದ ಪ್ರಶಸ್ತಿ – ಮನ್ನಣೆ

೧. ೧೯೯೯ – ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು (ರಾಚಪ್ಪಯ್ಯನ ಕೃತಿಗಳು)
೨. ೨೦೦೦ – ಕಲ್ಲದೇವನಹಳ್ಳಿ ಸಾಹಿತ್ಯ ಪ್ರತಿಷ್ಠಾನ, ಗುಲಬರ್ಗಾ (ರಾಚಪ್ಪಯ್ಯನ ಕೃತಿಗಳು)
೩. ೨೦೦೬ – ಕರ್ನಾಟಕ ರಾಜ್ಯೋತ್ಸವ ಪುಸ್ತಕ ಪ್ರಶಸ್ತಿ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ (ಅಮರಕಲ್ಯಾಣ)
೪. ೨೦೦೭ – ಅನಂತರಂಗ ಸಂಶೋಧನ ಸಾಹಿತ್ಯ ಪ್ರಶಸ್ತಿ, ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರು (ಅಮರಕಲ್ಯಾಣ)

೨೧. ಶೈಕ್ಷಣಿಕ ಉದ್ದೇಶಕ್ಕಾಗಿ (ವಿಶ್ವವಿದ್ಯಾಲಯ ಹೊರತುಪಡಿಸಿ) ನಿರ್ವಹಿಸಿದ ಯೋಜನೆಗಳು

೧. ಕೊಡೇಕಲ್ಲ ವಚನವಾಕ್ಯ ಸಂಗ್ರಹ (ಸಂ–ಇತರರೊಡನೆ)ಪ್ರ :ಕೊ.ಬ.ಅ.ಸಂಸ್ಥೆ, ಕೊಡೇಕಲ್ಲ ೨೦೦೪
೨. ಅಮರಕಲ್ಯಾಣ – ಪ್ರ : ನುಡಿ ಪ್ರಕಾಶನ, ಎಂ.ಪಿ.ಪಿ ನಗರ, ಹೊಸಪೇಟೆ ೨೦೦೫
೩. ದೇಸಿ ವೈದ್ಯ – ಕರ್ನಾಟಕ ರಾಜ್ಯ ಮಹಿಳಾ ವಿಶ್ವವದ್ಯಾಲಯ, ಬಿಜಾಪುರ ಪ್ರಗತಿ

೨೨. ನಿರ್ವಹಿಸಿದ ಇತರೆ ಕೆಲಸಗಳು

೧. ಆಡಳಿತಾತ್ಮಕ ಕೆಲಸಗಳು

೧. ಮುಖ್ಯಸ್ಥ, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿ.ವಿ, ೬–೧೧–೦೩ ರಿಂದ ೫–೧೧–೦೫
೨. ಮುಖ್ಯಸ್ಥ, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿ.ವಿ ೨೭–೦೨–೦೮ರಿಂದ ೨೬–೦೨–೧೦
೩. ಮುಖ್ಯಸ್ಥ, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿ.ವಿ ೨೭–೦೨–೧೧ರಿಂದ ಮುಂದುವರೆದಿದೆ

೨. ಹೆಚ್ಚಿನ ಜವಾಬ್ದಾರಿಗಳು

೧. ಸಹಾಯಕ ನಿರ್ದೇಶಕ, ಪ್ರಸಾರಾಂಗ ಕನ್ನಡ ವಿ.ವಿ, ೧೯೯೪ ರಿಂದ ೧೯೯೫
೨. ಕುಲಪತಿಗಳ ಆಪ್ತ ಸಹಾಯಕ, ಕನ್ನಡ ವಿ.ವಿ, ೧೯೯೫ ರಿಂದ ೧೯೯೬
೩. ಸಹಾಯಕ ನಿರ್ದೇಶಕ, ಅಧ್ಯಯನಾಂಗ ಕನ್ನಡ ವಿ.ವಿ, ೩–೭–೨೦೦೩ರಿಂದ ೬–೧೧–೦೩
೪. ಸಂಚಾಲಕ, ಎಂ.ಎ.ಪಿಎಚ್.ಡಿ (ಕನ್ನಡ ಸಾಹಿತ್ಯ)ಸಂಯೋಜಿತ ಪದವಿ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೩–೦೮–೨೦೦೭ ರಿಂದ ೨೦೦೯
೪. ಉಪ ನಿರ್ದೇಶಕ, ಯುಜಿಸಿ ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿ.ವಿ, ೧೦–೦೮–೦೭ ರಿಂದ ೧೯–೦೬–೦೮
೫. ಪ್ರಭಾರಿ ನಿರ್ದೇಶಕ, ಯುಜಿಸಿ ಮಹಿಳಾ ಅಧ್ಯಯನ ಕೇಂದ್ರ, ಕವಿಹಂ, ೧೮–೦೭–೭ ರಿಂದ ೨೭–೦೭–೨೦೦೭
೬. ನಿರ್ದೇಶಕ, ಯುಜಿಸಿ ಮಹಿಳಾ ಅಧ್ಯಯನ ಕೇಂದ್ರ, ಕವಿಹಂ, ೧೯–೦೬–೦೮ ರಿಂದ ೨೯–೦೬–೨೦೦೯

PDF created with pdfFactory trial version www.pdffactory.com